ಅಪರಂಜಿ

ಜೂನ್ 2000

ತಿಳಿನಗೆಯ ಕಾರಂ



ಪ್ರಕಾಶ್

ಆರೂರು ಜಯಲಕ್ಷ್ಮಿ ಸಿ. ಭಟ್

ಕ.ಬ. ವೀರಣ್ಣ ಕಣ್ಣಾಗಾಲ

ಎಂ.ಎನ್.ಕೆ.

ಹೆಚ್. ಗೋಪಾಲಕೃಷ್ಣ

ಗೋನವಾರ್

ಗುಂಡೂ ರಾನಾ

ಎಂ.ಎನ್.ಕೆ.

ಬಾಗೂರು ಮಾರ್ಕಾಂಡೇಯ

ಶಿವರಾಮ ಕಾರಂತ

ಎಸ್. ಎಸ್. ಗಣೇಶ್

ಕು.ಗೋ

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500

Ph. 3345259
email. aparanji@hotmail com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು- 560 003 (ಕೆಲಸದ ವೇಳೆ: ಬೆಳಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 17 ಜೂನ್- 2000 ಸಂಚಿಕೆ -9

ಅಪರಂಜಿ ಕಿಡಿ	ಪ್ರಕಾಶ್	2
ಆಣಕವಾಡು	ಆರೂರು ಜಯಲಕ್ಷ್ಮಿ ಸಿ. ಭಟ್	5
ಕನ್ನಡಿಗಾಸ್....!?	ಕ.ಬ. ವೀರಣ್ಣ ಕಣ್ಣಾಗಾಲ	7
ನಮ್ಮ ಮನೆಗೆ...	ಎಂ.ಎನ್.ಕೆ.	11
ನಾಯಿಗಳಿಗೆ ಡೀನೆನ್ಸಿ...	ಹೆಚ್. ಗೋಪಾಲಕೃಷ್ಣ	15
ವಿತರಣಾ ಸಮಾರಂಭ	ಗೋನವಾರ್	21
.... ರೆ	ಗುಂಡೂ ರಾನಾ	24
ಕನ್ನಡ ಲಿಪಿ	ಎಂ.ಎನ್.ಕೆ.	33
ಅವಲಕ್ಕಿ-ನಾನು-ಅತ್ರಿ	ಬಾಗೂರು ಮಾರ್ಕಾಂಡೇಯ	29
ಹಿಂದುಸ್ತಾನದಲ್ಲಿ	ಶಿವರಾಮ ಕಾರಂತ	31
"WWW.ABHIMANYU.COM"	ಎನ್. ಎಸ್. ಗಣೇಶ್	33
ದಗಲ್‌ಬಾಜಿಗಳು	ಕು.ಗೋ	38

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



ಅಪರಂಜಿ
(ತಿಳಿನಗೆಯ ಕಾರಂಜಿ)

ಸಂಪುಟ 17 ಜೂನ್- 2000 ಸಂಚಿಕೆ -9

ಪ್ರಾಣಾದಯೋ ವಾಕ್ಯ ಶೇಷಾತ್

- ಬ್ರಹ್ಮ ಸೂತ್ರಗಳು
೧-೪-೩-೧೨

ಪಂಚಾಯತ್ ಚುನಾವಣೆಗಳು ಮುಗಿದವು. ಇದರಿಂದ ಸ್ಥಳೀಯರಿಗೆ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸುವ ಅವಕಾಶ ದೊರೆಯುತ್ತದೆ. ಅಂದರೆ ಅಧಿಕಾರದ ವಿಕೇಂದ್ರೀಕರಣ ಎಂಬ ಸಿದ್ಧಾಂತವನ್ನು ಕಾರ್ಯರೂಪದಲ್ಲಿ ತಂದಂತಾಯಿತು.

ಬಹಳ ಸುಂದರ ಸಿದ್ಧಾಂತ, ಅಲ್ಲ ಎನ್ನುವವರು ಪ್ರಜಾಪ್ರಭುತ್ವವನ್ನೇ ಅಲ್ಲಗಳೆಯುತ್ತಾನೆ, ಪ್ರಜಾಪ್ರಭುತ್ವವನ್ನು 'ಅಲ್ಲ' ಎನ್ನುವವನು! ಅಲ್ಲ, ಅವನಿಗೆ ಎಂಟೆದೆ ಇದ್ದರೆ ಸಾಕೇ!

ಸಿದ್ಧಾಂತವು ಕಾರ್ಯರೂಪಕ್ಕೆ ಬಂದಾಗ ಏನಾಯಿತು! ಈ ಹಿಂದೆ ಎಮ್ಮೆಲ್ಲೆ ಸೀಟಿಗೆ ಇದ್ದ ಮೌಲ್ಯ ಈಗ ಪಂಚಾಯತ್ ಸೀಟಿಗೆ ಬಂದಿದೆಯಂತೆ, ಒಂದು, ಎರಡು, ಆರು, ಹತ್ತು, ಐವತ್ತು ಅಂತಲೂ ಜನ ಮಾತಾಡುತ್ತಾರೆ. ನಾಲಿಗೆಗೆ ಎಲುಬಿಲ್ಲ ಸಾವಿರಗಳಲ್ಲವಂತೆ, ಲಕ್ಷಗಳಂತೆ ಎಲ್ಲಾ ವದಂತಿ!

ಹೀಗೆ ಜನ ಪ್ರತಿನಿಧಿಗಳ ಮೌಲ್ಯವು ಏಕ್‌ದಂ ಏರಿದ್ದರಿಂದ ಪರಿಣಾಮಗಳು ಮೂರಂತೆ, ಕನ್ನಡದಲ್ಲಿ ಹೇಳಿದೆ ಏನು ಸುಖ? ಅವು ಪ್ರಿಪೋಲ್ ವಯೊಲೆನ್ಸ್, ಪೋಲ್‌ವಯೊಲೆನ್ಸ್, ಪೋಸ್ಟ್ ಪೋಲ್ ವಯೊಲೆನ್ಸ್.

ಇದರಿಂದ ಅನೇಕರ ಪ್ರಾಣಗಳು ಮತ್ತು ಇತ್ಯಾದಿಗಳು ಈಗ ಮಾತಿನಲ್ಲಿ ಮಾತ್ರ ಉಳಿದಿವೆ (ಶೇಷ) ಯಂತೆ. ಇದು ನಿಜವೇ? ಅಪ್ರಿಯ ಸತ್ಯವನ್ನು ಹೇಳಬಾರದಂತೆ.

ಈ ಬ್ರಹ್ಮಸೂತ್ರದ ಅಭಿಪ್ರಾಯ ಹಾಗಲ್ಲ. ಯಾರಲ್ಲಿ ಪಂಚ ಪಂಚ ಜನರೂ ಆಕಾಶವೂ ನಿಂತಿವೆಯೋ ಆ ಆತ್ಮನನ್ನು ಅಮೃತ ಬ್ರಹ್ಮವೆಂದು ಅರಿತು ಅಮೃತನಾಗಿದ್ದೇನೆ ಎಂಬ ಉಪನಿಷದ್ವಾಕ್ಯವು ಸಾಂಖ್ಯರ ಇಪ್ಪತ್ತೈದು ತತ್ತ್ವಗಳನ್ನು ಒಪ್ಪಿದೆ ಎಂದು ಸಾಂಖ್ಯರು ವಾದಿಸುತ್ತಾರೆ. ಪಂಚ ಪಂಚ ಜನರೆಂದರೆ ಇಪ್ಪತ್ತೈದು ತತ್ತ್ವಗಳಲ್ಲ. ಪ್ರಾಣವೇ ಮೊದಾದುವು ಎಂಬುದು ಈ ಸೂತ್ರದ ಅಭಿಪ್ರಾಯ.



ಪ್ರಕಾಶ್

ಪಿ.ಯು.ಸಿ. ಮೌಲ್ಯಮಾಪನ ಬಹಿಷ್ಕಾರ ಮುಂದುವರಿಕೆ

- ಸುದ್ದಿ

ಹೌದು, ಮೌಲ್ಯಗಳ ಮಾಪನ ಆಗಲೇಬೇಕು!!

★★★

ವಾಣಿಜ್ಯ ತೆರಿಗೆ ಅಧಿಕಾರಿ; ಕೋಟಿಗೂ ಅಧಿಕ ಆಸ್ತಿ

- ಪತ್ರಿಕೆ

ಅವರ 'ವಾಣಿ' ಶಕ್ತಿಶಾಲಿಯಾಗಿರಬೇಕು!!

★★★

ದೂರವಾಣಿ ಇಲಾಖೆ; ನಾಲ್ವರು ಅಧಿಕಾರಿಗಳ ಅಮಾನತು

- ದೆಹಲಿ ಸುದ್ದಿ

ದೂರುವಾಣಿಗಳ ಆಕ್ರಂದನ??

★★★

ಕ್ರಿಕೆಟ್ ಪಂದ್ಯಗಳಿಗಿಂತ, ಮ್ಯಾಚ್ ಫಿಕ್ಸಿಂಗ್ ಹಗರಣಗಳೇ ಹೆಚ್ಚು ಇಂಟರೆಸ್ಟಿಂಗ್ ಆಗಿವೆ!!

★★★

'ಮ್ಯಾಚ್ ಫಿಕ್ಸಿಂಗ್ ಅಂದರೆ ಗೊತ್ತೇನೋ?' ಅಂದ್ರೆ, ''ಅಶ್ವತ್ಥಾಮ ಹತಃ'' ಅಂದದ್ದು ಅಂತ ಹೇಳೋದೇ??

★★★

ಬಡ ಹೃದ್ರೋಗಿಗಳ ಪತ್ತೆಗೆ ಸಹಕಾರ; ಕೃಷ್ಣ ಭರವಸೆ

- ಸುದ್ದಿ

ಹಣವಂತ ರೋಗಿಗಳನ್ನು ವೈದ್ಯರೇ ಪತ್ತೆ ಮಾಡುತ್ತಾರೋ?!

★★★

''ನನಗೆ ಲವ್ ವೈರಸ್ ಭಯವೇ ಇಲ್ಲ''
''ಅದು ಹೇಗೆ ಅಷ್ಟು ಧೈರ್ಯ?''
''ನನ್ನ ಹತ್ತಿರ ಕಂಪ್ಯೂಟರ್ ಇಲ್ಲ!!''

★★★

ಬೆಳಕು ಚೆಲ್ಲುವ ಸಹಾಯಕನಿಂದ ಲಂಚ ಪಡೆಯುತ್ತಿದ್ದ ಡಿ.ಡಿ. ಅಧಿಕಾರಿ ಸಿ.ಬಿ.ಐ. ಬಲೆಗೆ

- ಪತ್ರಿಕೆ

ಅವರ ಭವಿಷ್ಯ ಕರಾಳವಾಗಿದೆ!!

★★★

ಹಳೆಗನ್ನಡ ಕಾವ್ಯ ಸರಳಾನುವಾದಕ್ಕೆ ಶೆಟ್ಟರ್ ಕರೆ

- ಸುದ್ದಿ

ಸರಳಾನುವಾದ ಅಂದರೇನು??

★★★

ದಕ್ಷಿಣ ಆಫ್ರಿಕ ಸೋತಾಗಲೆಲ್ಲ ದುಃಖಿತಪ್ತನಂತೆ ಕಂಡ ಕ್ರೋನಿಯೆಗೆ ಆಸ್ಕರ್ ಕೊಡುತ್ತಾರಂತೆ!!

★★★

ಅಣಕವಾಡು

(ಶ್ರೀ ಪುರಂದರ ದಾಸರ ಕ್ಷಮೆಕೋರಿ)
(ನರಜನ್ಮ ಬಂದಾಗ ನಾಲಿಗೆ ಇರುವಾಗ ಧಾಟಿ)

– ಆರೂರು ಜಯಲಕ್ಷ್ಮಿ ಸಿ. ಭಟ್

ನಗರಕ್ಕೆ ಬಂದಾಗ, ನರಕವಿದು ಎನಿಸಿದಾಗ,
ಕೃಷ್ಣಾ ಎನಬಾರದೆ॥
ಕಷ್ಟಕಾಲದಿ ನೀನು ಕೃಷ್ಣನ ನೆನೆಯದೆ
ಪಟ್ಟಣದಲಿಯೆಂತು ಬದುಕುವೆ ಮರುಳೆ॥

ಮನೆಯ ಗಡಿಬಿಡಿ ತಾಳಲಾರದೆ
ಮಡದಿ ನಿಂದಿಸುವಾಗ!
ಮಕ್ಕಳ ಕೈಯೆತ್ತಿ ಬಡಿದು
ಜೀವ ಸೋತಾಗಲು ಒಮ್ಮೆ ॥ಕೃಷ್ಣಾ॥

ಬಿ.ಟಿ.ಎಸ್ಸಿ.ಗೆ ಕಾಯುವಾಗ
ಬಸ್ಸಿನಲ್ಲಿ ನೇತಾಡುವಾಗ।
ಬಸ್ಸು ಬರದಿರೆ, ರಿಕ್ಷಾದಲ್ಲಿ
ಕುಕ್ಕಿ ಕುಕ್ಕಿ ಎಳೆಯುವಾಗಲು ॥ಕೃಷ್ಣಾ॥

ಕಛೇರಿ ಕೆಲಸ ಹೆಚ್ಚಿದಾಗ
ಬಾಸ್ ಬೈದು ತೆಗಳಿದಾಗ।
ಸಂಬಳ ಬರಲು ತಡವೇ ಆಗಿ
ಸಾಲಕ್ಕೇ ಕೈ ಚಾಚುವಾಗಲು ॥ಕೃಷ್ಣಾ॥

ಹಾದಿ ಬೀದಿ ತಿರುಗುವಾಗ
ಜನಜಂಗುಳಿಯಲಿ ನುಸುಳುವಾಗ।
ವಾಹನಗಳು ಮೊಗೆಯನುಗುಳಿ
ಉಸಿರುಕಟ್ಟಿ ನರಳುವಾಗಲು ॥ಕೃಷ್ಣಾ॥

ಬಂಧು ಮಿತ್ರ, ಸ್ವಜನ ಬಳಗ
ಟಿ.ವಿ. ಮುಂದೆ ತಪವ ಗೈಯಲು।
ಪ್ರೀತಿ, ಸ್ನೇಹವೇ ಮಾಯವಾಗಿ
ಒಂಟಿತನವದು ಕಾಡಿದಾಗಲು ||ಕೃಷ್ಣಾ||

ನಲ್ಲಿ ನೀರು ಬಾರದಾಗ
ಕರೆಂಟು ಕಣ್ಣು ಮುಚ್ಚಿರುವಾಗ।
ರೇಷನ್ ಅಂಗಡಿ ಎದುರು ನಿಂತು
ಸೀಮಣ್ಣೆ ಕ್ಯೂವಲಿ ಒಣಗುವಾಗಲು ||ಕೃಷ್ಣಾ||



" ಅರಣ್ಯನಾಶ" ತಡೆಗಟ್ಟುತ್ತೀನಿ
ಅಂತ ನಿಮಗೆಲ್ಲಾ ಆಶ್ವಾಸನೆ ನೀಡ್ತಿದೀನಿ.

ಕನ್ನಡಿಗಾಸ್...!?

– ಕೆ.ಬಿ. ವೀರಣ್ಣ ಕಣ್ಣಾಗಾಲ

ಬೆಂಗಳೂರು ಎಂದರೆ ಮಾಯಾ ನಗರಿ, ಕನಸಿನ ಲೋಕ! ''ಇದೇನು 'ಅಲರ್ಜಿ' ನಗರವನ್ನು ಏನೇನೋ ಹೊಗಳ್ತಿದಾರಲ್ಲ?'' ಎಂದು ಮೂಗು ಮುರಿಯಬೇಡಿರಿ. 'ದೂರದ ಬೆಟ್ಟ ನುಣ್ಣಗೆ!' ಅಂತಾರಲ್ಲ ಹಾಗೆ ದೂರದಲ್ಲಿರುವುದರಿಂದ ನನಗೆ ಹಾಗೆನ್ನಿಸುತ್ತಿರಬೇಕು! ಕರ್ನಾಟಕದ ಹೆಮ್ಮೆಯ ರಾಜಧಾನಿ ಬೆಂಗಳೂರಿನಲ್ಲಿ ಕಾರ್ಯ ನಿಮಿತ್ತ ಕೆಲವು ದಿನಗಳು ಕಳೆಯುವ ಸೌಭಾಗ್ಯ(?) ನನ್ನ ಪಾಲಿಗೆ ಒದಗಿ ಬಂದಿತು. ''ಬೆಂಗಳೂರಿಗೆ ನೀವು ಎಷ್ಟು ಬಾರಿ ಹೋಗಿ ಬಂದರೇನು? ಬೆಂಗಳೂರು ಸಿಟಿ ಬಸ್ಸಿನಲ್ಲಿ ಪ್ರಯಾಣಿಸದಿದ್ದರೆ!?'' ಎಂದು ಓರ್ವ ಮಿತ್ರರು ಉದ್ಗರಿಸಿದ್ದು ನೆನಪಾಯಿತು. ಆದುದರಿಂದ ಈ ಬಾರಿ ಇರುವಷ್ಟು ದಿನ ಸಿಟಿ ಬಸ್ಸಿನಲ್ಲಿಯೇ ಪ್ರಯಾಣಿಸತೊಡಗಿದೆ. ಬೆಂಗಳೂರಿನ ರಸ್ತೆಗಳಲ್ಲಿ ಬಸ್ಸುಗಳಲ್ಲಿ ಎಲ್ಲಾ ಭಾಷೆಯ ಜನರು ಓಡಾಡುತ್ತಿದ್ದರು. 'ಅರೇ... ಕರ್ನಾಟಕದ ರಾಜಧಾನಿ ಅಂದ್ರೆ ಇದೇ ತಾನೆ...?' ಎನ್ನುವ ಅನುಮಾನ ಉಂಟಾಯ್ತು. ಸಿಟಿ ಬಸ್ಸಿನಲ್ಲಿ ನನ್ನ ಪಕ್ಕದಲ್ಲಿ ಉಪಸ್ಥಿತರಿದ್ದವರನ್ನು ''ಯೇನ್ ಸ್ವಾಮಿ ತಾವು ಕನ್ನಡದವರೇನು...?'' ಎಂದು ಪ್ರಶ್ನಿಸಿದೆ. ಅವರು ನನ್ನ ಮುಖಾರವಿಂದವನ್ನು ಒಂದು ಕ್ಷಣ ಎವೆಯಿಕ್ಕದೆ ನೋಡುತ್ತ ''ಯಸ್... ಯಸ್... ವೈ...?'' ಎಂದು ಕೇಳಿದಾಗ ಕನ್ನಡ ಭಾಷೆಯಲ್ಲಿ ಈ ಪದಗಳನ್ನು ಕೇಳದೆಯೆ ಇದ್ದುದರಿಂದ ಗಲಿಬಿಲಿಗೊಂಡೆನು. ನನಗೋ ಹಾಳದ್ದು ಕನ್ನಡ ಬಿಟ್ಟರೆ ಬೇರೆ ಭಾಷೆ ತಿಳಿಯದು! ಆದುದರಿಂದ ಅವರತ್ತ ಮತ್ತೆ ವಿನಂತಿಸಿದೆ. ''ಸ್ವಾಮಿ, ನನಗೆ ಕನ್ನಡವಲ್ಲದೆ ಮತ್ತೇನು ತಿಳಿಯದು ದಯೆಮಾಡಿ ಸ್ವಲ್ಪ ಕನ್ನಡದಲ್ಲಿಯೇ ಉತ್ತರಿಸಿದರೆSS...'' ಎಂದು ರಾಗ ಎಳೆದೆನು ನಾನು. ನನ್ನತ್ತ ಮತ್ತೊಮ್ಮೆ ಅಸಡ್ಡೆಯ ದೃಷ್ಟಿ ಹರಿಸುತ್ತ ಬಾಯ್ತೆರೆದರು. ''ಯಾವ ಸೀಮೆ ಜನಾರೀ ನೀವು... ಈಗ ನಾನು ಮಾತಾಡಿದ್ದೂ ಕನ್ನಡಾನೇರಿ... ಬೆಂಗಳೂರಿನಲ್ಲಿ ಕನ್ನಡ ಅಂದ್ರೆ ಹಿಂಗೇ ಮಾತನಾಡೋದು! ಎಲ್ಲಿಂದ ಬಂದ್ರೀ ತಾವು?'' ಎನ್ನುತ್ತ ನನಗೇ ಗಾಬರಿ ಹುಟ್ಟಿಸಿದನು ಆಸಾಮಿ.

''ಹೌದಾSS... ಬೆಂಗಳೂರಿನಲ್ಲಿ ಕನ್ನಡ ಅಂದ್ರೆ ಹಿಂಗೇನಾSS?'' ಎಂದು ಅಚ್ಚರಿಯಿಂದ ಅವನತ್ತಲೆ ನೋಡಿದೆ. ''ಮತ್ತೇನ್ರಿ... ಬೆಂಗಳೂರು ಅಂದ್ರೆ ಸುಮ್ನೆನಾSS? ಇದು ಇಂಟರ್ ನ್ಯಾಷನಲ್ ಸಿಟೀರೀ... ಅದಕ್ಕೆ 'ಬೆಂಗಳೂರು

ಕನ್ನಡ' ಅಂದ್ರೆ ಇಂಗ್ಲೆಂಡ್‌ನಿಂದ ಬಂದವ್ರು ಅರ್ಥ ಮಾಡಿಕೊಳ್ಳಬೇಕು ಹಾಗೆ ಸುಧಾರಿಸಿದ್ದೀವಿ ನಮ್ಮ ಭಾಷೇನಾ!'' ಅವನು ಹಾಗೆ ಹೇಳಿದಾಗ ಅವನ ಧ್ವನಿಯಲ್ಲಿ ಹೆಮ್ಮೆಯ ಭಾವನೆ ಸೂಸಿತು. ನನಗೋ ಅವನ ಹೇಳಿದ ವಿಷಯ ತಿಳಿದು ಮಹಾ ಅಚ್ಚರಿಯುಂಟಾಯ್ತು. ನನ್ನ ತಲೆ ಒಳಗಡೆ ಒಂದು ಅನುಮಾನ ಆಕ್ರಮಿಸಿಕೊಂಡಿತು. ಅದನ್ನೂ ಅವನನ್ನೇ ಕೇಳಿ ನನ್ನ ಅನುಮಾನ ಪರಿಹರಿಸಿಕೊಳ್ಳಲು ಅಣಿಯಾದೆ. ''ಸ್ವಾಮಿ, ತಾವು ತಪ್ಪು ತಿಳಿದುಕೊಳ್ಳುವುದಿಲ್ಲ ಅಂದ್ರೆ ತಮ್ಮಲ್ಲಿ ಒಂದು ಚಿಕ್ಕ ಪ್ರಶ್ನೆ...'' ಎನ್ನುತ್ತ ತಡವರಿಸಿದೆ.

''ಅಯ್ಯೋ ಕೇಳ್ರೀ... ಅದಕ್ಕಾಕೆ ಹೀಗೆ ವ್ಯಸನ ಪಡ್ತಿದ್ದೀರಿ!'' ಎಂದು ನನ್ನ ಪ್ರಶ್ನೆ ಏನಿರಬಹುದು ಎಂದು ಅವನು ಕತೂಹಲಗೊಂಡಿರುವುದು ನನ್ನ ಅರಿವಿಗೆ ಬಂದಿತ್ತು.

''ಏನಿಲ್ಲಾ... ಇಲ್ಲೀ... ಬೆಂಗಳೂರಿನಲ್ಲಿ... ನಮ್ಮ ಕನ್ನಡಿಗರನ್ನು ಹೇಗೆ ಪತ್ತೆ ಹಚ್ಚುವುದು. ಯಾಕೆಂದ್ರೆ ಇಲ್ಲಿ ಇವರು ಆಡುವ ಕನ್ನಡದಿಂದ ನನ್ನಿಂದ ಕನ್ನಡಿಗರನ್ನು ಗುರುತು ಹಚ್ಚಲು ಅಸಾಧ್ಯ. ಅದಕ್ಕೆ ಕೇಳ್ದೆ ಅಲ್ಲದೆ ಇಲ್ಲೀ ಕನ್ನಡಿಗರಿಗಿಂತ ಪರಭಾಷಾ ಬಾಂಧವರೆ ಹೆಚ್ಚುತ್ತಿದ್ದಾರೆ ಅನ್ನೋದು ಕೇಳಿದ್ದೀನಿ... ಅದಕ್ಕೆ'' ಎಂದು ದೇಶಾವರಿ ನಗೆ ನಕ್ಕೆ. ನನ್ನ ಪಕ್ಕದಲ್ಲಿದ್ದಾಂತ ನನ್ನ ಪ್ರಶ್ನೆಯಿಂದ ಕಿಂಚಿತ್ತೂ ಬೇಸರ ಪಟ್ಟುಕೊಳ್ಳದೆ ನನ್ನ ಅನುಮಾನ ಪರಿಹರಿಸಲು ಬಾಯ್ತೆರೆದನು.


''ನೋಡೀ, ಇವ್ರೇ... ನಮ್ಮ ಕನ್ನಡಿರಗರದ್ದು ಒಂದೇ ಸ್ವಭಾವ! ನೀವು ಬೆಂಗಳೂರಿಗಾದ್ರು ಹೋಗ್ರಿ, ಬೆಳಗಾವಿಗಾದ್ರು ಹೋಗಿ ನೋಡ್ರೀ ಅಷ್ಟೇಕೆ ಅತ್ಲಾಕಡೆ ಬೀದರ್, ಗುಲ್ಬರ್ಗಾ, ಧಾರವಾಡ, ಹುಬ್ಬಳ್ಳಿ ಎಲ್ಲಿಗೆ ಬೇಕಾದ್ರು ಹೋಗಿ ನೋಡ್ರಿ, ಒಂದು ವಿಷಯ ಮಾತ್ರ ತಿಳಿದುಕೊಳ್ರಿ, ಕನ್ನಡಿಗರನ್ನ ಪತ್ತೆ ಹಚ್ಚುವುದು ಅಷ್ಟೇನೂ ಕಷ್ಟದ ಕೆಲಸ ಅಲ್ಲ ಬಿಡ್ರಿ. ಈಗ ನಾನು ಹೇಳುವ ಪಾಯಿಂಟ್‌ಗಳನ್ನೆಲ್ಲ ನೀವು ನೆನಪಿಟ್ಟುಕೊಂಡ್ರೆ ಆಯ್ತು. ನಿಮಗೆ ನೆನಪಿನ ಶಕ್ತಿ ಕಡಿಮೆ ಅನ್ನೋದಾದ್ರೆ ಗುರುತು ಹಾಕಿಕೊಂಡ್ರು ಆಯ್ತು. ಪಾಯಿಂಟ್ ನಂಬರ್ ಒನ್...'' ಎಂದು ಅವನು ಹೇಳಲು ಅನುವಾದಾಗ ನಾನು ಆತನನ್ನು ಸ್ವಲ್ಪ ತಡೆದು ''ಒಂದ್ನಿಮ್ಸಾ...'' ಎನ್ನುತ್ತ ಜೇಬಿನಿಂದ ಒಂದು ಸಣ್ಣ ಡೈರಿ ತೆಗೆದು ಅವನು ಹೇಳಿದ ವಿಷಯವನ್ನು ಭಯ ಭಕ್ತಿಗಳಿಂದ ಗುರುತು ಹಾಕಿಕೊಳ್ಳಲು ಅನುವಾಗುತ್ತ, ''ಈಗ ಹೇಳಿ,'' ಎಂದು ಲೈನ್ ಕ್ಲಿಯರ್ ಮಾಡಿದೆ. ಅವನು ಸುರು ಮಾಡಿದ ''ಪಾಯಿಂಟ್ ನಂಬರ್ ಒನ್... ನಿಮಗೆ ಅನುಮಾನ ಆದ್ರೆ ''ನಿಮ್ಮ ಮಕ್ಕಳನ್ನು ಯಾವ ಸ್ಕೂಲಿಗೆ ಸೇರಿಸಿದ್ದೀರಿ?'' ಅಂತ ಕೇಳ್ರಿ ಆಗ ಅವರು

''ಇಂಗ್ಲೀಷ್ ಕಾನ್ವೆಂಟ್!'' ಅಂದ್ರೋ ಅವರು ಕಟ್ಟಾ ಕನ್ನಡಿಗರು ಅಂತ ಅರಿತುಕೊಳ್ಳೋದು ವೆರಿ ವೆರಿ ಸಿಂಪಲ್'' ಎನ್ನುತ್ತ ನಕ್ಕನು.

ನನಗೆ ಅವನ ಪಾಂಡಿತ್ಯ ಕಂಡು ಅಚ್ಚರಿಯಾಗಿ ಅವನ ಬಗ್ಗೆ ಗೌರವ ಭಾವನೆ ಮೂಡಿತು. ''ನೆಕ್ಸ್ಟ್...'' ಎಂದು ಅವನನ್ನ ಹುರಿದುಂಬಿಸಿದೆ. ಅವನು ಆವೇಶ ಬಂದವನಂತೆ... ''ಪಾಯಿಂಟ್ ನಂಬರ್ ಟೂ... ನೀವು ಅವನನ್ನು ಸೂಕ್ಷ್ಮವಾಗಿ ಗಮನಿಸಿ. ಬೇರೆ ಯಾರೊಡನೆಯಾದರೂ ಸಂಭಾಷಣೆಯಲ್ಲಿ ನಿರತನಾದಾಗ... ಅವರವರ ಭಾಷೆಯಲ್ಲಿ ಅವರವರಿಗೆ ಉತ್ತರವನ್ನು ಆ ಆಸಾಮಿ ಕೊಡುತ್ತಿದ್ದಾನೆ. ಅಂದ್ರೆ ಅವನು ಕನ್ನಡಿಗನಲ್ಲದೆ ಬೇರೆ ಭಾಷೆಯವನಾಗಿರಲು ಸಾಧ್ಯವೇ ಇಲ್ಲ'' ಎಂದನು ಖಡಾ ಖಂಡಿತವಾಗಿ ನಾನು ಅವನ ಅಭಿಪ್ರಾಯಕ್ಕೆ ತಲೆದೂಗುತ್ತ ಎರಡನೆಯ ಪಾಯಿಂಟನ್ನು ಗುರುತಿಸಿಕೊಂಡನು. ಅವನು ಮೂರನೆಯ ಪಾಯಿಂಟ್ ಏನಿರಬಹುದೆಂದು ಕುತೂಹಲದಿಂದ ಅವನ ಬಾಯಿಯನ್ನೇ ನಾನು ಬಾಯಿಬಿಟ್ಟು ನೋಡುತ್ತಲಿದ್ದೆ. ಅವನು ಮತ್ತೆ ಬಾಯಿ ತೆರೆದು. ''ಪಾಯಿಂಟ್ ನಂಬರ್ ತ್ರೀ... ನೀವು ಯಾರನ್ನಾದ್ರು ಅಡ್ರೆಸ್ ಕೇಳ್ತೀರಿ... ನಿಮ್ಮ ಕೈಯಲ್ಲಿ ನಿಮಗೆ ಬೇಕಾದವರ ವಿಳಾಸದ ಚೀಟಿ ಇರುವುದಿಲ್ಲ. ಆದರೂ ನಿಮ್ಮಿಂದ ಪ್ರಶ್ನೆಗಳ ಮೇಲೆ ಪ್ರಶ್ನೆ ಕೇಳಿ ನಿಮ್ಮನ್ನು ಮುಟ್ಟಬೇಕಾದ ವಿಳಾಸಕ್ಕೆ ಸ್ವತಃ ಅವರೇ ಕರೆದೊಯ್ದು ಮುಟ್ಟಿಸುತ್ತಾರೆ ಅಂದ್ರೆ ಅವರು ಅಪ್ಪಟ ಕನ್ನಡಿಗರೆ ಎನ್ನುವುದರಲ್ಲಿ ಯಾವುದೇ ಸಂಶಯ ಬೇಡ! ಎನ್ನುತ್ತ ಗೆಲುವಿನ ನಗೆ ನಕ್ಕರು. ''ಮತ್ತೆ ಇನ್ನು ಏನಾದರು ಪಾಯಿಂಟ್ಸ್ ಇದೆಯೋ?'' ಎಂದು ಪ್ರಶ್ನಿಸಿದೆ ಅದೇ ಕುತೂಹಲದಿಂದ. ಅದಕ್ಕೆ ಅವರು ಸ್ಫೂರ್ತಿಗೊಂಡು ಇದೇ ಸ್ವಾಮಿ ಎಲ್ಲಿ ಮುಗೀತು... ಪಾಯಿಂಟ್ ನಂಬರ್ ಫೋರ್ ಈ ನವೆಂಬರ್ ತಿಂಗಳು ಬಂದರೆ ನಿಂತಲ್ಲಿ ಕುಳಿತಲ್ಲಿ 'ಕನ್ನಡ... ಕನ್ನಡ' ಎಂದು ಜಪಿಸುತ್ತ ಡಿಸೆಂಬರ್ ಚಳಿ ಕಂಡಾಕ್ಷಣ ಕನ್ನಡಾಭಿಮಾನವೆಲ್ಲ ಡಿಸೆಂಬರ್ ಚಳಿಗೆ ಕಂಬಳಿ ಹೊದ್ದು ಮಲಗಿಬಿಟ್ಟವರಾರಾದರು ನಿಮಗೆ ಗೋಚರಿಸಿದರೆ ಅವರು ಪಕ್ಕಾ ಕನ್ನಡಿಗರೆಂದು ತಿಳಿಯಿರಿ!'' ಎಂದು ತಿಳಿ ಹೇಳಿದರು ನಾನು ಅದನ್ನೂ ಗುರುತು ಹಾಕಿಕೊಂಡು ''ನಂತರ...?'' ಎಂದೆನು.

''ಇನ್ನೂ ಇದೇರೀ...'' ಎಂದಾಕ್ಷಣ ಕಂಡಕ್ಟರ್ ''ಮಲ್ಲೇಶ್ವರಂ ಫೋರಟೀನ್ ಕ್ರಾಸ್ ಇಳ್ಕೊಳ್ರಿ!'' ಎಂದು ಎಚ್ಚರಿದಾಕ್ಷಣ ಪಕ್ಕದಲ್ಲಿದ್ದ ಪಕ್ಕ ಕನ್ನಡಿಗ ಒಮ್ಮಲೆ ಬಸ್ಸಿನಿಂದ ತನ್ನ ಸ್ಟಾಪು ಬಂದದ್ದರಿಂದ ಇಳಿದು ಜನಸಾಗರದಲ್ಲಿ ಕರಗಿ ಹೋದನು. ಅವನ ವಿಳಾಸ ಪಡೆದಿದ್ದರೆ ಇನ್ನಷ್ಟು ಮಾಹಿತಿಗಳು ದೊರೆಯುತ್ತಿದ್ದ ಬಗ್ಗೆ ನನಗೆ ವಿಷಾದವೆನಿಸಿತು. ನಿರಾಸೆಯಿಂದ ಕಿಟಕಿಗೆ ಕಣ್ಣು

ನೆಟ್ಟು ಕುಳಿತಿದ್ದ ಅವನ ಬಗ್ಗೆಯೇ ಯೋಚಿಸುತ್ತ ಆ ಆಸಾಮಿ ಮತ್ತೆ ಹಿಂದಕ್ಕೆ ಓಡಿ ಬಂದು ''ಇನ್ನೊಂದು ವೆರಿ ವೆರಿ ಇಂಪ್ಟೆಂಟ್ ಪಾಯಿಂಟ್..'' ಎಂದು ಏನೋ ಹೇಳಲು ತವಕಿಸುತ್ತಿದ್ದ. ಬಸ್ಸಿಗೆ ಜನರು ಹತ್ತುತ್ತಲೇ ಇದ್ದರು ''ಅದೇನೂ ಬೇಗ ಹೇಳಿ ನಾರ್'' ಎಂದು ಅವಸರಿಸಿದೆ. ಅವನು ನನ್ನತ್ತ ನೋಡುತ್ತ ''ಯಾರಾದ್ರು ಪರಕೀಯರು ತಮ್ಮ ಮನೆಗೆ ಬಂದ್ರು ಅಂತ ಇಟ್ಕೊಳ್ಳಿ ಅವರಿಗೆ ತನ್ನ ಮನೆಯಲ್ಲಿನ ಹಾಸಿಗೆ ನೀಡಿ... ತಾನು ಹರಕಲು ಚಾಪೆಯಲ್ಲಿ ಮಲಗಿದ ಅನ್ಕೊಳ್ಳಿ ಅವನು ಪಕ್ಕ ಕನ್ನಡಿಗ ಅನ್ನುವುದರಲ್ಲಿ ಯಾವ ಅನುಮಾನವೂ ಬೇಡ!'' ಎಂದು ಅವನು ಹೇಳಿದ ತಕ್ಷಣ ಕಂಡಕ್ಟರ್ ''ರೈಟ್... ರೈಟ್' ಎಂದಿದ್ದ. ಬಸ್ ಮುಂದೆ ಸಾಗಿತು ಆತ ಅಲ್ಲಿಯೇ ನಿಂತು ಕೈ ಬೀಸುತ್ತಲೇ ನಿಂತು ತಾನೂ ಕನ್ನಡಿಗ ಎಂದು ಸಾಬೀತು ಪಡಿಸುತ್ತಿದ್ದನು.



'' ನಿಮ್ಗೆ ಅಸಿಡಿಟಿ ಬರುತ್ತೇ ಅನ್ನೋ ಹೆದ್ರಿಕೆಗೇನೇ ಅಸಿಡಿಟಿ ಬಂದಿದೇರೀ''

ನಮ್ಮ ಮನೆಗೆ ISO

– ಎಂ.ಎಸ್.ಕೆ.

ಮಟ ಮಟ ಮಧ್ಯಾಹ್ನ ಫ್ಯಾನ್ ಕೆಳಗೆ ಮಲಗಿಕೊಂಡು ಪೇಪರ್ ತಿರುವಿಹಾಕುತ್ತಿದ್ದೋಳು ಇದ್ದಕ್ಕಿದ್ದಂತೆ ನನ್ನ ಕೇಳೋಕೆ ಶುರು ಹಚ್ಚಿದಳು; ಈ ISO ISO ಅಂತಾರಲ್ಲ ಹಾಗಂದ್ರೇನ್ರೀ? ಅದರಿಂದೇನ್ರೀ ಪ್ರಯೋಜ್ನ?

ಹಾಗಂದ್ರೆ ಈ ಸರ್ಟಿಫಿಕೇಟ್ ತೊಗೊಂಡೋರು ಮಾಡೋ ಕೆಲ್ಸಾ ಎಲ್ಲಾ ಚೆನ್ನಾಗಿರುತ್ತೇಂತ. ಅಚ್ಚುಕಟ್ಟಾಗಿರುತ್ತೆ. ಅವರ ಕೆಲಸದಲ್ಲಿ ಒಂದು ಥರ ರೀತಿ ರುಜುವಾತು ಇರುತ್ತೆ, ಅದನ್ನ ನಂಬಬಹುದೂರಂತ ಅರ್ಥ.

ಯಾರ್ ಬೇಕಾದ್ರೂ ತೊಗೋಬೋದ ಇದನ್ನ?

ಯಾಕಾಗಲ್ಲಾ. ನೀನ್ ಬೇಕಾದ್ರೂ ತೊಗೋಬೋದು. ನಮ್ಮ ಮನೆಗೇ ತೊಗೋಬೋದು.

ಅದರಿಂದ ನನಗೇನು ಪ್ರಯೋಜ್ನ. ಆ ಸರ್ಟಿಫಿಕೇಟ್ನ ಗೋಡೆಗೆ ತಗುಲಿಹಾಕೋದಷ್ಟೇ ತಾನೇ?

ಅದರಿಂದ ಬಹಳಾ ಪ್ರಯೋಜ್ನ ಇದೆಯಮ್ಮಾ. ಅದಕ್ಕೇ ಅಲ್ವಾ ಅದನ್ನ ತೊಗೋಂಡೋರೆಲ್ಲಾ ''ನಮಗೆ ಸರ್ಟಿಫಿಕೇಟ್ ಬಂದಿದೆ. ಇನ್ನು ಮುಂದೆ ನಮ್ಮ ಗುಣಮಟ್ಟ ಅಂತರರಾಷ್ಟ್ರೀಯ'' ಅಂತ ಡಂಗೂರ ಸಾರೋದು.

ಅಲ್ರೀ ನಮ್ಮ ಮನೆಗೆ ಅದನ್ನ ತೊಗೊಂಡ್ರೆ ನನಗೇನ್ರೀ ಪ್ರಯೋಜ್ನ?

''ಇದು ISO Certificate ತೊಗೊಂಡ ಮೊದಲನೇ ಮನೆ'' ಅಂತ ಬೋರ್ಡ್ ಹಾಕ್ಕೋಬೋದು. ಪೇಪರ್‌ನಲ್ಲಿ ನಿನ್ನ ಫೋಟೋ ಜೇರೆ ಹಾಕಿಸ್ಕೋಬೋದು. ನೀನೂ ನಾನೂ ISO Stickers ಮಾಡ್ಸಿ ನನ್ನ ದಟ್ಟೀ ಪಂಚೆ, ನಿನ್ನ ಸೀರೇ ಅಂಚಿಗೆಲ್ಲಾ ಅಂಟಿಸಿಕೊಳ್ಳಬಹುದು. ನಾವು ಬರಿಯೋ ಕಾಗದಗಳಿಗೆಲ್ಲಾ ಅದನ್ನ ಅಂಟಿಸ್ಕೋಬೋದು.

ಪೇಪರ್ನೋರೆಲ್ಲಾ ಬಂದು ನಿನ್ನ ಇಂಟರ್ವ್ಯೂ ಮಾಡಿ ಅದನ್ನ ಪೇಪರ್ಲೀ ನಿನ್ನ ಫೋಟೋ ಜೊತೆ ಹಾಕ್ಲೂಬಹುದು. ನಿನಗೆ ಸನ್ಮಾನ ಸಿಕ್ಕಿದ್ರೂ ಸಿಕ್ಕಬಹುದು.

ಅಯ್ಯಯ್ಯೋ! ಹಾಗಾದ್ರೆ ನಮ್ಮ ಕ್ಲಬ್ಬಿನೋರ್ ಮುಖ ನೋಡೋಕೆ ಎಷ್ಟು ಮಜಾ ಇರುತ್ತೆ? ಏನ್ ಮಾಡ್ಬೇಕ್ರೀ ನಮ್ಮ ಮುಂದಿನ ಕಿಟ್ಟೀ ಪಾರ್ಟೀಗೆ ಮುಂಚೇನೇ ಅದನ್ನ ತೊಗೋಳೋಕೇ?

ಮೊದಲು ಒಬ್ಬ ಕನ್ಸಲ್ಟೆಂಟ್ನ ಹಿಡೀಬೇಕು. ಅವರು ಕೇಳಿದ ದುಡ್ಡು ಕೊಟ್ಟು ಅವರು ಹೇಳಿದ ಹಾಗೆಲ್ಲಾ ಕುಣೀಬೇಕಮ್ಮ

ಅದೇನೇನ್ ಮಾಡ್ಬೇಕು ಸ್ವಲ್ಪ ಸರಿಯಾಗಿ ಬಿಡಿಸಿ ಹೇಳ್ಬಾರ್ದೇ?

ಸರಿಯಾಗೇ ಹೇಳ್ತೀನಿ, ಕೇಳ್ಕೋ:

ಮನೆ ಚೊಕ್ಕಟವಾಗಿಡಬೇಕು, ಎಲ್ಲೂ ಕಸ ಗಿಸ ಕಾಣ್ಬಾರ್ದು. Toilets, Bathrooms ಯಾವಾಗಲೂ ಕ್ಲೀನಾಗಿರಬೇಕು, ಗಬ್ಬುನಾತ ಬರಕೂಡ್ದು, ಒಗೆದ ಬಟ್ಟೆಗಳನ್ನು ತಂದು ಮಡಿಸದೇನೆ ಸೋಫಾ ಮೇಲೆ ಬಿಸಾಕಿರಕೂಡದು. ಮಂಚಗಳ ಕೆಳಗೆ ಹಳೇ ಸಾಮಾನುಗಳಿಟ್ಟು ಬೆಡ್ ಶೀಟ್ ಇಂದ ಮುಚ್ಕೋ ಹಾಗಿಲ್ಲ ಇನ್ನು ಮುಂದೆ. ಡೈನಿಂಗ್ ಟೇಬಲ್ ಮೇಲೇ ಸಿಕ್ಕಾಪಟ್ಟೆ ಅಂಗಡಿಯಿಂದ ತಂದ ಸಾಮಾನು, ಹಳೇ ನ್ಯೂಸ್ ಪೇಪರ್, ಅದೂ ಇದೂ ಬಿದ್ದಿರಬಾರ್ದು.

ಇಂಥಿಂಥಾ ಸಾಮಾನು ಇಲ್ಲಿಲ್ಲೇ ಇಡತೀವೀಂತ ಡಿಸೈನ್ ಮಾಡಿ ಅಲ್ಲೇ ಇಟ್ಟು ಬೋರ್ಡ್ ಬರೀಬೇಕು. ISO ಸರ್ಟಿಫಿಕೇಟ್ ಬಂದ್ಮೇಲೆ ನೀನು ನನ್ನ ಕಣ್ಣು ತಪ್ಪಿಸೋದಕ್ಕೆ ಚಕ್ಕುಲಿ, ನಿಪ್ಪಟ್ಟು, ತೇಂಗೋಳು ಯಾವ್ಯಾವ್ದೋ ಡಬ್ಬದಲ್ಲಿ ಮುಚ್ಚಿಡೋ ಹಾಗಿಲ್ಲಾ. ಚಕ್ಕುಲಿ, ಚಕ್ಕುಲಿ ಡಬ್ಬದಲ್ಲೇ ಇಟ್ಟು ಆ ಡಬ್ಬದ ಮೇಲೆ "ಚಕ್ಕುಲೀ ಡಬ್ಬ" ಅಂತ ಚೆನ್ನಾಗಿ ಕಾಣಿಸೋ ಹಾಗೆ ಬರೀಬೇಕು. ಆ ಚಕ್ಕುಲಿ ಮಾಡಿದ ಡೇಟ್ ಕೂಡ ಕಾಣಿಸೋ ಹಾಗೆ ಬರೀಬೇಕು. ಮೊನ್ನೆ ನಾನು ಯಾವುದೋ ಹಳೇ ಡಬ್ಬ ತೆಗೆದಾಗ ಎಂದೋ ಮಾಡಿ ಬಚ್ಚಿಟ್ಟಿದ್ದ ತೇಂಗೋಳು ರವೇವುಂಡೆ ಸಿಕ್ಕಿಬೀಳಲಿಲ್ಲವಾ ಎಲ್ಲಾ ಬೂಷ್ಟು ಹಿಡಿದಿರಲಿಲ್ಲವಾ ISO ಬಂದಮೇಲೆ ಹಾಗೆಲ್ಲಾ ಮಾಡೂ ಹಾಗಿಲ್ಲಾ ಗೊತ್ತಾಯಿತಾ...

ಅದೆಲ್ಲಾ ಬಿಡ್ರೀ... ಸರಿಯಾದ ಪಾಯಿಂಟಿಗೆ ಬನ್ನಿ...

ಬರ್ತೀನಿ ತಡಿ. ಸಾರಿನ ಪುಡಿ, ಹುಳೀಪುಡಿ, ಈರುಳ್ಳಿ ಹುಳಿ, ಹುಳಿ ತೊವ್ವೇ ನುಚ್ಚಿನವುಂಡೆ, ಕೇಸರೀ ಭಾತು. ಇತ್ಯಾದೀ ಇತ್ಯಾದಿ ತಿಂಡಿಗಳನ್ನ ಹೇಗೆ ಮಾಡ್ತಿವೀಂತ ಬರೆದು ಅಡುಗೇ ಮನೇಲಿ ಡಿಸ್ಪ್ಲೇ ಮಾಡಬೇಕು. ಹ್ಯಾಗೆ ಬರೆದಿದ್ದೀವೋ ಹಾಗೇ ಮಾಡ್ತೀವಿಂತ ಪ್ರೂವ್ ಮಾಡ್ಬೇಕು. ISO Auditors ಬಂದಾಗ ರುಚಿ ರುಚಿಯಾಗಿ ತಿಂಡೀ ಕಾಫೀ ಆಗ್ಬೇಕು.

ಇರ್ಲೀ ಬಿಡ್ರೀ ನಾನು ಕಂಡಿದೀನಿ. ಅವರೆಲ್ಲ ಬಂದಾಗ ಆ ಹೊಸದಾಗಿ ಶುರು ಆಗಿದ್ಯಲ್ಲಾ ರುಚಿ ದರ್ಶಿನೀ ಹೋಟೆಲ್ ಅಲ್ಲಿಂದಾನೇ ತರಿಸಿ ನಾನೇ ಮನೇಲೇ ಮಾಡಿದ್ದೂಂತ ಹೇಳಿಬಿಟ್ಟರಾಯಿತು....

ಈ ಮನೆಗೆ ಗಿರಾಕಿಗಳ್ಯಾರ್ಯಾರೂಂತ ಬೋರ್ಡ್ ಬರೀಬೇಕು. ಅವರ ಕಂಪ್ಲೇಂಟ್ಸ್ ಎಲ್ಲ ಬರೆಯೋಕೆ ಒಂದು ಬುಕ್ ಇಡಬೇಕು. (ಕಾಫೀ ಸರಿಯಾಗಿ ಟೈಂಗೇ ಬರಲಿಲ್ಲಾ, ಸ್ನಾನಕ್ಕೆ ಹೋದಾಗ ಬಚ್ಚಲ ಮನೇಲಿ ಟೂಥ್ ಪೇಸ್ಟ್, ಸೋಪು ಇರಲಿಲ್ಲಾ. ಈ ನಡುವೆ ಸಾರಿನ ಹದ ಸರಿಯಾಗಿಲ್ಲ ದಿನಾ ಬೆಳಿಗ್ಗೆ ಬರೀ ಒಗ್ಗರಣೆ ಅವಲಕ್ಕಿ ತಿಂದೂ ತಿಂದೂ ಬೇಜಾರಾಗಿದೆ. ಇತ್ಯಾದಿ ಇತ್ಯಾದಿ) ನೀನು ದಿನಾ ಆ ಕಂಪ್ಲೇಂಟ್ಸ್ ಎಲ್ಲಾ ಓದಿ ಅವನ್ನ ಸರಿಪಡಿಸೋಕೆ ಏನೇನು ಕ್ರಮಗಳನ್ನ ತೊಗೊಂಡಿದೀ ಅಂತ ಬರೆದಿಡಬೇಕು... ಮತ್ತೆ ಕಂಪ್ಲೇಂಟ್ಸ್ ಬರದಿರೋ ಹಾಗೆ ನೋಡ್ಕೋಬೇಕು.

ನಾನೇನೋ ಆ ಬುಕ್ ಅಲ್ಲಿಡತೀನಿ. ನೀವ್ಯಾರಾದ್ರೂ ಕಂಪ್ಲೇಂಟ್ ಬರೀತೀನೀಂತ ಆ ಪುಸ್ತಕ ಮುಟ್ಟಿದರೆ ನಿಮ್ಮ ಗ್ರಹಚಾರ ಬಿಡಿಸ್ಬಿಡ್ತೀನೀ ನೋಡ್ಕೊಂಡಿರಿ... ಇಷ್ಟೇನೋ, ಇನ್ನೂ ಏನಾದ್ರೂ ಇದೆಯಾ? ಅಲ್ಲಾ ಇಷ್ಟೆಲ್ಲಾ ಹೇಳ್ತಾರಲ್ಲಾ ಆ ISO ನೋರು, ಅವರ ಮನೇಲೆಲ್ಲಾ ಹೀಗೇ ಇರುತ್ತಂತಾ?

ಅಲ್ಲಮ್ಮ ಇದೊಂದು ದೊಡ್ಡ ವ್ಯಾಪಾರ ಆಯಿತಲ್ಲ ನಿಂದು. ಅವರೇನು ತಮ್ಮ ಮನೇಗೆ ISO ತಗೊಂಡಿಲ್ಲವಲ್ಲಾ. ನೀನ್ತಾನೇ ತೊಗೊತಿರೋದು. ಅಲ್ಲಾ ಅವರು ಹೇಳಿದ್ದಾಗೇ ಅವರೂ ನಡ್ಕೊಬೇಕೂಂತ ಯಾವ ರೂಲ್ಸಿದೆ ಹೇಳು? ಹೋಗಲಿ ಬಿಡು, ಇನ್ನೊಂದು ಮುಖ್ಯವಾದ ಪಾಯಿಂಟ್ ಮರೆತಿದ್ದೆ. ISO ಬಂದಮೇಲೆ ನೀನು ಗಂಟೆಗಟ್ಲೆ ಟೆಲಿಫೋನ್ ಹಿಡಿದು ಮಾತಾಡೂ ಹಂಗಿಲ್ಲ; ಯಾರಾದರೂ ಫೋನ್ ಮಾಡಿದಾಗ within five rings ಫೋನ್ ರಿಸೀವ್ ಮಾಡ್ಬೇಕು...

ಅರ್ರೇ ಬಿಡ್ರೀ ಇದನ್ನ ಯಾರಾದ್ರೂ ಕಂಪ್ಲೇನ್ ಮಾಡ್ದಾಗ ಫೋನ್ ಕೆಟ್ಟಿತ್ತೂ ಅಂದ್ರಾಯ್ತು. ಇಷ್ಟೇನಾ, ಇಲ್ಲಾ ಇನ್ನೂ ಇದೆಯೆ ನಿಮ್ಮ ಸರಕು....

ಸದ್ಯಕ್ಕೆ ಇಷ್ಟೇ ಸಾಕೂಂತಾ ಕಾಣುತ್ತೆ. ಇನ್ನೂ ಯೇನಾದ್ರೂ ಬೇಕಾಂತ ಕನ್ಸಲ್ಟೆಂಟ್ನ ಕೇಳ್ಕೊಂಡು ಬರ್ತೀನಿ.

(One week later)

ರೀ ಹೋದ್ವಾರ ಮಾತಾಡಿದ್ವೆಲ್ಲ ಈ ISO ವಿಚಾರಾನಾ. ನಾನೂ ಅದನ್ನ ಸ್ವಲ್ಪ ಗುಟ್ಟಾಗೇ ಮೀನಾಕ್ಷಮ್ಮನೋರ ಹತ್ರ ಹೇಳಿದ್ದೆ. ಅವರು ನಮ್ಮ ಕ್ಲಬ್ ಸೆಕ್ರೆಟರಿ ಅಂಬುಜಮ್ಮನ ಹತ್ರ ಹೇಳ್ಬಿಟ್ಟಿದಾರೇಂತ ಕಾಣುತ್ತೆ. ಅಂಬುಜಮ್ಮ ಹೇಳಿದ್ರಂತೆ "ಓಹೋ ಅವಳು ISO ತೊಗೋತಾಳಾ ಹೇಗೇಂತ ನಾನೂ ನೋಡ್ತೀನಿ. ನನ್ನ ಅಣ್ಣನ ಮಗ ಒಬ್ಬ ದೊಡ್ಡ ISO Consultant. ನಾನು ಅವನ ಹತ್ರಾನೇ ಹೋಗಿ Auditor ಆಗಿ ಟ್ರೈನಿಂಗ್ ತೊಗೊಂಡು ಇವಳ ಮನೇಗೇ ಹೋಗ್ತೀನಿ Audit ಗೆ. ಅವಳ ಮನೇನೆಲ್ಲ ಜಾಲಾಡಿ ಇರೋ ಕೊಳೇ ಹಳೇ ಎಲ್ಲ ಈಚೆಗೆ ತೆಗೆದು ಒಂದು ಲಿಸ್ಟ್ ಮಾಡಿ ನಮ್ಮ ಕ್ಲಬ್ ಮೆಂಬರ್ಸ್‌ಗೆಲ್ಲ ಗುಟ್ಟಾಗಿ ಕಾಪೀಸ್‌ನ ಸರ್ಕ್ಯುಲೇಟ್ ಮಾಡ್ತೀನಿ. ಆವಾಗ ಈಚೆಗೆ ಬರುತ್ತೆ ಇವಳ ಬಂಡ್ವಾಳ" ಅಂದಳಂತೆ. ಅವಳು ಹಾಗೆ ಮಾಡ್ಬೋದೇನ್ರೀ?

It is a distinct possibility. ಇದ್ಯಾಕೋ ಎಡವಟ್ಟಾಯಿತಲ್ಲಾ. ಆ ಅಂಬುಜಮ್ಮ ಆಡಿಟರ್ ಆಗಿ ಬಂದು ನಮ್ಮ ಸಂಡಿಗೆ ಡಬ್ಬ Inspect ಮಾಡ್ವಾಗ ಅದರಲ್ಲಿರೋ ಜಿರಳೆಗಳು ಸಿಕ್ಕಿಬಿದ್ರೆ ಆಗ್ಹೋಯ್ತು ನಮ್ಮ ಗತಿ... ಪರಿಸ್ಥಿತಿ ಬಿಗಡಾಯಿಸೋ ಥರ ಕಾಣಿಸ್ತಿದೆ...

ಸಾಕ್ರೀ ನಿಮ್ಮ ಮಾತು ಅತೀ ಆಯ್ತು. ಆ ಸಂಡಿಗೇ ಡಬ್ಬಾನ ಖಾಲೀ ಮಾಡಿ ಬಿಸಿಲಿಗೆ ಹಾಕಿ ಮತ್ತೆ ತುಂಬಿಡೀಂತ ನಿಮಗೆ ಎಷ್ಟು ಸಲಾ ಹೇಳ್ದೆ ಮಾಡಿದ್ರಾ ನೀವು?. ಸುಮ್ನೆ ಕಾಮೆಂಟ್ ಮಾಡಕ್ಕೆ ಬರುತ್ತೆ. ಮನೇಲಿ ಮೂರ್ ಕಾಸಿನ Useful ಕೆಲಸ ಮಾಡ್ತೀರ ನೀವೂ?. ಅದಿರ್ಲೀ ಬಿಡಿ. ನಾನು ಸದ್ಯಕ್ಕೆ ಈ ISOಗೆ ಕೈ ಹಾಕಲ್ಲಾ. ಈ ಅಂಬುಜ ಅವಳ ಅಣ್ಣನ ಮಗನ ಸಹಾಯ ತೊಗೊಂಡು ತಾನೇ ISO ಮೊದಲೇ ತೊಗೋಳೊಕ್ಕೆ ಟ್ರೈ ಮಾಡೇ ಮಾಡ್ತಾಳೆ. ಅವಳ ಸೈಕಾಲಜೀ ನಂಗೆ ಚೆನ್ನಾಗಿ ಗೊತ್ತು. ನಾನೇ ಯಾಕೆ ಈ ಆಡಿಟರ್ ಟ್ರೈನಿಂಗ್ ತೊಗೊಂಡು ಅವಳ ಮನೇಗೆ ಹೋಗಿ ಅವಳ ಗುಟ್ಟೆಲ್ಲಾ ಹೊರಗೆ ಎಳೆದು ಹಾಕ್ಬಾರ್ದೂಂತ. ಅವಳ ಮನೆ ಕೆಲಸದ ತಿಮ್ಮಕ್ಕನ್ನ ಸ್ವಲ್ಪ ಅಡ್ಜಸ್ಟ್ ಮಾಡ್ಕೊಂಡ್ರೆ ಆ ಮನೇಲಿ ಎಲ್ಲೆಲ್ಲಿ ಏನೇನಿದೇಂತ ಈಸಿಯಾಗಿ ಗೊತ್ತಾಗಿ ಹೋಗುತ್ತೆ. ಆವಾಗ ನನ್ನ ಆಡಿಟ್ ಕೂಡ ಸುಲಭವಾಗುತ್ತೆ. ಏನಂತಿರಿ ನೀವು? ನನ್ನ ಪ್ಲಾನ್ ಹೇಗಿದೇರೀ?

ಪ್ಲಾನ್ ದಿವಿನಾಗಿದೆ. ಎಲ್ಲಾ ಪರ್ಫೆಕ್ಟ್ ಆಗಿದೆ Success Assured 100% full speed ahead. ಎಲ್ಲಿ ಈಗ ಒಂದು ಲೋಟ At least non - ISO Certified ಬಿಸೀ ಬಿಸೀ ಕಾಫೀ ಸಿಗುತ್ತಾ ನೋಡೋಣ.

ನಾಯಿಗಳಿಗೆ ಡೀಸೆನ್ಸಿ, ಡೆಕೊರಾಂ...

– ಹೆಚ್. ಗೋಪಾಲಕೃಷ್ಣ

ಬೀದಿ ನಾಯಿಗಳನ್ನ ಹಿಡಿಯುವವರನ್ನು ನೋಡಿದ್ದಿರಾ? ಬೀದಿ ನಾಯಿಗಳನ್ನ ಹಿಡಿಯುವುದಕ್ಕೆ ಅದೆಂತಹ ಚಾಣಾಕ್ಷತೆ ಮತ್ತು ಜಾಣ್ಮೆ ಬೇಕು ಅಂತ ಹಲವಾರು ಸಲ ನಾನು ಬೆರಗಾಗಿದ್ದೀನಿ. ಈ ಬೀದಿನಾಯಿ ಹಿಡಿಯುವವರ ಬುದ್ಧಿವಂತಿಕೆಯನ್ನೇ ಚುನಾವಣೆ ನಂತರದ ಸರ್ಕಾರ ರಚನೆಗೆ ಮೊದಲಿನ ಕೊಂಡುಕೊಳ್ಳುವ ವ್ಯವಹಾರದಲ್ಲಿ ನಮ್ಮ ರಾಜಕೀಯ ಮುಖಂಡರುಗಳು ಸಹ ಅನುಸರಿಸುತ್ತಾರೆ ಅಂತ ನನ್ನ ಗುಮಾನಿ. ನಾಯಿಗಳನ್ನ ಹಿಡಿಯುವವರನ್ನು ಸರಿ ಸುಮಾರು ಒಂದೇ ತಿಂಗಳು ಸೂಕ್ಷ್ಮವಾಗಿ ಗಮನಿಸಿದಲ್ಲಿ ಈ ವಿದ್ಯೆ ಕರತಲಾಮಲಕ ಆಗುತ್ತೆ ಅಂತ ರಾಜಕೀಯಕ್ಕೆ ಹೊಸದಾಗಿ ಪ್ರವೇಶ ಬಯಸುತ್ತಿರುವವರಿಗೆ ನಾನು ಗ್ಯಾರಂಟಿ ಬೇಕಾದರೆ ನೀಡಬಲ್ಲೆ. ಒಂದು ದಿನ ಬರುವುದು, ಬೀದಿ ನಾಯಿಗಳೇ ಇಲ್ಲದ ದಿವಸ ಅಂತಹ ದಿವಸಗಳಲ್ಲಿ ನಾಯಿ ಕಚ್ಚುವಿಕೆಗೆ ಚಿಕಿತ್ಸೆ ನೀಡುವ ಡಾಕ್ಟರುಗಳ ಜೀವನ ಹೇಗೆ ಎಂದೂ ಚಿಂತಾಕ್ರಾಂತನಾಗಿದ್ದೇನೆ.

ನಮ್ಮ ಸಹೋದ್ಯೋಗಿ ಒಬ್ಬರು ಕೆಲವು ಸಮಯ ಈ ನಾಯಿ ಹಿಡಿಯುವವರ ಮೇಲ್ವಿಚಾರಕರಾಗಿದ್ದರು. ನಾಯಿ ಹಿಡಿಯುವವರು ಬಂದ ಕೂಡಲೇ ಬೀದಿ ನಾಯಿಗಳು ಮೊದಲು ಬೊಗಳುತ್ತವಂತೆ ನಂತರ ಅದೇನೊ ಮೋಡಿಗೆ ಒಳಗಾದ ಹಾಗೆ ಇವರನ್ನ ಇವರ ಚಾಟಿಯನ್ನ ನೋಡುತ್ತಾ ಓಡಲೋ ಬೇಡವೋ ಅಂತ ಸಂಧಿಗ್ಧದಲ್ಲಿ ಒದ್ದುತ್ತವಂತೆ. ನಂತರ ಅರೆ ಮನಸ್ಸಿನಿಂದ ಒಲ್ಲದ ಮನಸ್ಸು ಅನ್ನಿ - ಮೆಲ್ಲಗೆ ಹಿಂದೆ ಹಿಂದೆ ಸರಿದ ಹಾಗೆ ನಾಟಕ ಆಡುತ್ತವಂತೆ. ಅಷ್ಟರಲ್ಲಿ ನಾಯಿ ಹಿಡಿಯುವಾತ ತನ್ನ ಕೈಯಲ್ಲಿನ ಉದ್ದನೆ ಕುಣಿಕೆಯನ್ನು ತನ್ನ ಬೆನ್ನ ಹಿಂಭಾಗದಲ್ಲಿ ಬಚ್ಚಿಟ್ಟುಕೊಂಡು ನಾಯಿಯನ್ನು ಸಮೀಪಿಸಿರುತ್ತಾರೆ. ನಾಯಿ ಓಡಲೋ ಬೇಡವೋ, ಬೊಗಳಲೋ ಬೇಡವೋ, ಕಚ್ಚಲೋ ಬೇಡವೋ ಎಂಬ ದ್ವಂದ್ವದಲ್ಲಿ ಟುಬಿ ಆರ್ ನಾಟ್ ಟುಬಿ ಎಂಬ ಉಯ್ಯಾಲೆಯಲ್ಲಿ, ಅತ್ತದರಿ ಇತ್ತ ಪುಲಿ ಎಂಬ ಡೋಲಾಯಮಾನದಲ್ಲಿ ಇರುವಾಗ ಈತ ಕುಣಿಕೆ ಸಡಲಿಸಿ ನಾಯಿಯ ಕೊರಳಿಗೆ ಬೀಳುವ ಹಾಗೆ ಎಸೆಯುತ್ತಾನೆ. ನೂರಕ್ಕೆ ನೂರರಷ್ಟು ಸಲ

- ಅಪರೂಪಕ್ಕೆ ಎಲ್ಲೋ ಒಂದು ಸಲ ಈ ಕುಣಿಕೆ ಬೀಳದಿರಬಹುದು - ಯಶಸ್ವಿ ಆಗುತ್ತಾನೆ. ನಮ್ಮ ರಾಜಕಾರಣಿಗಳನ್ನೂ ಸಹ ನೋಡಿ - ಇವರೂ ಹಾಗೇ ದ್ವಂದ್ವದಲ್ಲಿ ಡೋಲಾಯಮಾನದಲ್ಲಿ ಟುಬಿ ಆರ್ ನಾಟ್ ಟುಬಿ ಎಂಬ ತೊಳಲಾಟದಲ್ಲಿ ಮುಳುಗಿ ತೇಲಿ ಈಜಿ ನಂತರ ನೆಲ ಗಟ್ಟಿ ಇರಬಹುದು ಎಂದು ಎಲ್ಲೋ ಒಂದು ಕಡೆ ನೆಲೆಗೊಳ್ಳಲು ಯತ್ನಿಸುತ್ತಾರೆ. ರಾಜಕಾರಣಿಗಳೂ ಬೀದಿ ನಾಯಿಗಳೂ ಒಂದೇ ಅಂತ ಖಂಡಿತ ಪ್ರಮಾಣವಾಗಿ, ದೇವರ ಆಣೆಯಾಗಿಯೂ ಸಹ ನಾನು ಹೇಳುತ್ತಿಲ್ಲ. ಬದಲಿಗೆ ಬರೇ ಸಾಮ್ಯ ಹೇಳಿದೆ ಅಷ್ಟೇ. ನಾಯಿ ಹಿಡಿಯುವ ಮೇಲ್ವಿಚಾರಕನ ಕೆಲಸವನ್ನ ನನ್ನ ಸಹೋದ್ಯೋಗಿ ಒಬ್ಬರು ನಡೆಸಿದ್ದರು ಅಂತ ಹೇಳಿದೆ ಅಲ್ಲವೇ? ಅವರದೊಂದು ಅನುಭವ ನಾಯಿಗಳಿಗೆ ಡೀಸೆನ್ಸಿ ಡೆಕೋರಾಂ ಗಳನ್ನು ಕಲಿಸಿದ್ದನ್ನ - ನಿಮಗೆ ಹೇಳಲೇಬೇಕು. ಅದಕ್ಕೆ ಮೊದಲು ನಿಮಗೆ ಈತ ಎಲ್ಲಿ ಕೆಲಸ ನಿರ್ವಹಿಸುತ್ತಿದ್ದ ಎಂಬುದರ ವಿವರಣೆ ನೀಡಲೇಬೇಕು. ಫ್ಯಾಕ್ಟರಿಗಳು ಅಂದರೆ ನಿಮ್ಮ ಕಲ್ಪನೆ ಏನಿದೆ? ಒಂದು ದೊಡ್ಡ ಷೀಟು ಹೊದಿಸಿದ ಆವರಣ ಅದರೊಳಗೆ ತುಂಬಿರುವ ಹಲವಾರು ರೀತಿಯ ವಿನ್ಯಾಸದ, ಆಕಾರದ, ಬಣ್ಣದ ಯಂತ್ರಗಳು ಮತ್ತು ಯಂತ್ರಗಳೊಂದಿಗೆ ಕೆಲಸ ಮಾಡುತ್ತಿರುವ ಕೊಳಕು ನೀಲಿ ಬಟ್ಟೆ ತೊಟ್ಟ ಕಾರ್ಮಿಕರು - ಪ್ರೊಲೆಟೇರಿಯನ್‌ಗಳು ಅಂತ ತಾನೇ? ಕಾರ್ಖಾನೆ ಅಂದರೆ ಈ ಅರ್ಥಕ್ಕೂ ಮೀರಿದ್ದು. ನೀವು ತಿಳಿದ ಹಾಗೆ ಯಂತ್ರ, ಕಾರ್ಮಿಕರ ಜತೆ ಜತೆಗೆ ದೊಡ್ಡ ದೊಡ್ಡ ಯಂತ್ರಾಗಾರಗಳು, ಅದರ ಕೆಲಸಗಳಿಗೆ ನೆರವು ನೀಡುವಂತಹ ಇಲಾಖೆಗಳ ಕಾರ್ಖಾನೆಯ ಉತ್ಪಾದನೆಯನ್ನು ಗ್ರಾಹಕರಿಗೆ ತಲುಪಿಸುವ ಇಲಾಖೆಗಳು ಗ್ರಾಹಕರಿಗೆ ತಲುಪಿಸುವಾಗ ಪಾಲಿಸಬೇಕಾದ ಸರ್ಕಾರೀ ಆದೇಶಗಳನ್ನು ನಿಗಾ ವಹಿಸುವ ಇಲಾಖೆ ಈ ರೀತಿ ಹಲವಾರು ಇಲಾಖೆಗಳಲ್ಲದೇ ಕಾರ್ಮಿಕರ ಯೋಗಕ್ಷೇಮ ಸುರಕ್ಷತೆ, ಆತ ರಜೆ ... ಇತ್ಯಾದಿ ನೋಡಿಕೊಳ್ಳುವ ಹಲವಾರು ಇಲಾಖೆಗಳು ಇರುತ್ತವೆ. ಈ ಜನಗಳನ್ನು ನೋಡಿಕೊಳ್ಳಲು ಅವರ ವೈಯಕ್ತಿಕ ವಿವರ ಇತ್ಯಾದಿ ಇಡಲು ಸಿಬ್ಬಂದಿ ಇಲಾಖೆ ಇರುತ್ತೆ ಇವೆಲ್ಲವೂ ಹಲವಾರು ಕಟ್ಟಡಗಳಲ್ಲಿ ನಡೆದರೂ ಈ ಎಲ್ಲ ಕಟ್ಟಡಗಳೂ ಸೇರಿದ ಹಾಗೆ ಒಂದು ದೊಡ್ಡ ಕಾಂಪೌಂಡು ಹಾಕಿರುತ್ತಾರೆ. ಕಾಂಪೌಂಡಿಗೆ ಒಂದೋ ಎರಡೋ ಬಾಗಿಲು ಇರಿಸಿ ಆಗಮನ ನಿರ್ಗಮನಗಳು ಈ ಗೇಟಿನ ಮುಖಾಂತರವೇ ನಡೆಯುತ್ತದೆ. ಹೈಟೆಕ್ ಸಾಫ್ಟ್‌ವೇರ್ ಕಂಪನಿಗಳ ಹೆಸರೇ ಕೇಳಿರದಿದ್ದ ದಿವಸಗಳಲ್ಲಿ ಅಂದರೆ ನಮ್ಮ ದೇಶ ಸ್ವಾತಂತ್ರ ಪಡೀತು ನೋಡಿ

ಅಂತಹ ಕಾಲದಲ್ಲಿ ಹುಟ್ಟಿದ ಕಾರ್ಖಾನೆಗಳಾಗಿದ್ದರೆ ಅವುಗಳಿಗೆ ಮತ್ತೆ ಒಂದು.. ಬಾಲಂಗೋಚಿ.. ಇರುತ್ತೆ. ಅವು ಏನೆಂದರೆ ಕಂಪೆನಿ ಕ್ವಾರ್ಟರ್ಸ್! ಫ್ಯಾಕ್ಟರಿ ಸುತ್ತದ ಗಳಿಕೆ ವಿಸ್ತೀರ್ಣ ಎಷ್ಟಿರುತ್ತೊ ಅದರ ಹತ್ತರಷ್ಟು ಇಪ್ಪತ್ತರಷ್ಟು ಐವತ್ತರಷ್ಟು ವಿಸ್ತೀರ್ಣದಲ್ಲಿ ಕಾರ್ಖಾನೆಯ ಕೆಲಸಗಾರರು ಅಧಿಕಾರಿಗಳು ವಾಸ ಮಾಡಲು ಮನೆಗಳನ್ನು ಕಟ್ಟಿಸಿರುತ್ತಾರೆ ಇವನ್ನೇ ಕ್ವಾರ್ಟರ್ಸ್ ಎನ್ನುವುದು. ಇಲ್ಲಿನ ನಾಗರಿಕ ಸೌಲಭ್ಯಗಳ ವಿತರಣೆ ಉಸ್ತುವಾರಿ ಇತ್ಯಾದಿಗಳಿಗೇ ಒಂದು ಇಲಾಖೆ ಸದಾಕಾಲ ಸನ್ನದ್ಧವಾಗಿರುತ್ತೆ ಇಂತಹ ಇಲಾಖೆಯಲ್ಲಿ ನನ್ನ ಮಿತ್ರ ಒಂದು ಚಿಕ್ಕ ಕೆಲಸದಲ್ಲಿ ಇದ್ದದ್ದು. ಕಾರ್ಖಾನೆಯಿಂದ ಯಾವುದೇ ವಸ್ತು ಆಚೆ ಹೋಗಬೇಕಾದ್ರೆ, ಒಳ ಬರಬೇಕಾದರೆ ಅದಕ್ಕೆ ಸೂಕ್ತ ಪರವಾನಗಿ ಬೇಕೇಬೇಕು. ಅದೇ ನಿಯಮ ವ್ಯಕ್ತಿಗಳಿಗೂ ಸಹ; ಕೆಲಸದ ವೇಳೆಯಲ್ಲಿ ಕಾರ್ಖಾನೆಯ ಹೊರಗೆ ಹೋಗಬೇಕು ಅಥವಾ ಬರಬೇಕು ಅಂದರೆ ಹಿರಿ ಅಧಿಕಾರಿ ಅನುಮತಿಸಲೇಬೇಕು. ಕಾರ್ಮಿಕರಲ್ಲಿ ಶಿಸ್ತು ಮೂಡಿಸಲು ಮತ್ತು ಕಾರ್ಖಾನೆಯ ಆಸ್ತಿಪಾಸ್ತಿಗಳು ದುರ್ವ್ಯಯ ಆಗದಿರಲು ಇಂತಹ ಕ್ರಮಗಳು ಎಲ್ಲ ಕಾರ್ಖಾನೆಗಳಲ್ಲೂ ಜಾರಿಯಲ್ಲಿವೆ. ಇದು ಒಂದು ಹಿನ್ನೋಟ.

ಈ ಹಿನ್ನೆಲೆಯಲ್ಲಿ ನಾಯಿ ಹಿಡಿಯುವವರ ಉಸ್ತುವಾರಿ ನನ್ನ ಗೆಳೆಯನ ಜವಾಬ್ದಾರಿ. ಐದಾರು ಜನ ಕ್ಯಾಷುಯಲ್ ಲೇಬರ್‌ಗಳನ್ನು (ಇವರಿಗೆ ತಲಾ ಸಂಬಳ ನೂರು ದಿನಕ್ಕೆ) ಒಬ್ಬ ಐದನೇ ಸಂಬಳದ ಗ್ರೂಪಿನ ಡ್ರೈವರ್ ನನ್ನ (ಈತನಿಗೆ ತಿಂಗಳಿಗೆ ಎಂಟು ಸಾವಿರ) ಒಬ್ಬ ಎಂಟನೇ ಸಂಬಳದ ಗ್ರೂಪಿನ ಮೇಲ್ವಿಚಾರಕ (ಈತನಿಗೆ ಹತ್ತುಸಾವಿರ) ನನ್ನ ಸೇರಿಸಿದ ಮೂರುವರೆ ಲಕ್ಷದ ಒಂದು ಲಾರಿ ಅದರ ಹಿಂಬದಿಯಲ್ಲಿ ಸಾಲಾಗಿ ಜೋಡಿಸಲಾಗಿದ್ದ ನಾಲ್ಕು ನಾಯಿ ಕೇಜುಗಳು (ಇವಕ್ಕೆ ನಾಯಿ ಬೋನು ಅಂತ ಹೆಸರು. ಒಂದೊಂದಕ್ಕೂ ತಲಾ ಐವತ್ತು ಸಾವಿರ ರೂಪಾಯಿ) ಇವುಗಳನ್ನ ಸಿದ್ಧ ಮಾಡಿಕೊಂಡು ಇವರೆಲ್ಲರಿಗು ಪರವಾನಗಿ ಪಡೆಯಲು ಕಾಗದ ಪತ್ರ ತಯಾರಿಸಿಕೊಂಡು ಮೇಲ್ವಿಚಾರಕ ಅಧಿಕಾರಿಯ ಕಛೇರಿಗೆ ಹಾಜರಾದ. ಮೇಲ್ವಿಚಾರಕ ಅಧಿಕಾರಿಗಳಿಗೆ ಅವರದ್ದೆ ಆದ ಕ್ಯಾಬಿನ್‌ಗಳು ಇರುತ್ತವೆ ಮತ್ತು ಆಚೆಯಿಂದ ಒಳಗೆ ಏನು ನಡೆಯುತ್ತಿದೆ ಎಂದು ತಿಳಿಯುವ ಹಾಗೆ ಆದಕ್ಕೆ ಅಲ್ಯೂಮಿನಿಯಂ ಗೋಡೆಗಳನ್ನು ಹೊಂದಿಸಿರುತ್ತಾರೆ. ಅಧಿಕಾರಿ ಪಿ.ಎ. ಬಳಿ ಪರವಾನಗಿ ಪತ್ರ ಇಟ್ಟ ''ಆಕೆ'' ಇರಿ ಸಾಹೇಬರು ಬಿಸಿ ಇದಾರೆ ಅಂದಳು. ಈತ ಅಲ್ಲೇ ಇದ್ದ ಸ್ಟೂಲಿನ ಮೇಲೆ ಕೂತ

ಹತ್ತು ನಿಮಿಷ ಆಯಿತು, ಇಪ್ಪತ್ತು ನಿಮಿಷ ಆಯಿತು... ಒಂದು ಗಂಟೇನೂ ಕಳೆಯಿತು ಅಧಿಕಾರಿಗಳ ಸ್ನೇಹಿತರು ಬರುತ್ತಿದ್ದರು ಹೋಗುತ್ತಿದ್ದರು, ಈತನ ಪರವಾನಗಿ ಪತ್ರಕ್ಕೆ ರುಜುವೇ ಬಿದ್ದಿರಲಿಲ್ಲ, ಐದಾರು ಬಾರಿ ಪಿ.ಎ. ಬಳಿ ಹೋದರೂ ಆಕೆ ಸಾಹೇಬರು ಬಿಸಿ, ಬಿಸಿರೀ ಅಂತಲೇ ಹೇಳುತ್ತಿದ್ದಳು. ಈತನಿಗೆ ತಡೆಲಯ ಆಗದೇ ಅಧಿಕಾರಿ ಕೊಠಡಿ ಬಾಗಿಲು ತೆಗೆದು ಒಳಗೆ ನುಗ್ಗಿದ. ಒಳಗೆ ಗಹನವಾದ ಚರ್ಚೆ ನಡೀತಿತ್ತು. ಚರ್ದೆಯ ವಿಷಯ ಬಾಳೆಕಾಯಿ ಬಜ್ಜಿ ಮಾಡಬೇಕಾದರೆ ಬಾಳೆ ಕಾಯನ್ನ ಅಡ್ಡಡ್ಡ ಹೆಚ್ಚುವುದೋ ಅಥವಾ ಉದ್ದುದ್ದ ಹೆಚ್ಚುವುದೋ ಎಂಬುದು. ಈತ ಒಳಗೆ ನುಗ್ಗಿದ ಕೂಡಲೇ ಈತನನ್ನ ಒಂದು ಹುಳುವನ್ನು ನೋಡುವ ತರಹ ಅಧಿಕಾರಿ ನೋಡಿದರಂತೆ ನಂತರ ಆತನ ಚರ್ಚೆ ಮುಂದುವರೆಯಿತಂತೆ 'ಸಾರ್ ಪಾಸ್‌ಗೆ ಸೈನ್ ಆಗಬೇಕು' ಅಂದ ಈತ. ಅಧಿಕಾರಿ ಮುಖ ಸಿಂಡರಿಸಿ "... ಡೀಸೆನ್ಸಿ ಡೆಕೊರಾಂ ಇಲ್ಲವೇನ್ರಿ ನಿಮಗೆ? ಹೇಳದೇ ಕೇಳದೇ ಒಳಗೆ ಹಾಗೆ ನುಗ್ತೀರಿ?" ಅಂತ. ಗೆಳೆಯನಿಗೆ ಮೆಣಸಿನ ಕಾಯಿ ಇಟ್ಟಹಾಗೆ ಅನಿಸಿತಂತೆ.

"ನಿಮ್ಮ ಬ್ಲಡಿ ಗುದ್ದಲಿ ಸಹಿಗೋಸ್ಕರ ನಾವೆಲ್ಲಾ ಕಾದಿದೀವಿ - ದಿವಸಕ್ಕೆ ನೂರು ರೂಪಾಯಿ ತಗೊಳ್ಳೊ ಐದು ಜನ ಕ್ಯಾಷುಯಲ್ಸು, ತಿಂಗಳಿಗೆ ಎಂಟುಸಾವಿರ ತಗೊಳ್ಳೋ ಗ್ರೂಪ್ ಫೈವು, ತಿಂಗಳಿಗೆ ಹತ್ತು ಸಾವಿರ ತಗೊಳ್ಳೊ ಗ್ರೂಪ್ ಎಂಟು ಅವರ ಜತೆಗೆ ನಾನು ನಮ್ಮ ಎಲ್ಲರ ಸಂಗಡ ಮೂರೂವರೆ ಲಕ್ಷದ ಲಾರಿ ಅದರ ಹಿಂದೆ ಎರಡು ಲಕ್ಷದ ಬೋಸುಗಳು ನಿಮಗೆ ಒಂದು ಥೋಲಾ ಸಿಗ್ನೇಚರ್ ಹಾಕೋದಿಕ್ಕ ಏನ್ರೀ? ಬಾಳೆಕಾಯಿ ಬೋಂಡ ಹೇಗೆ ಮಾಡಬೇಕು ಅಂತ ಮನೇಲಿ ಮಗೂನ ಕೇಳಿ ಹೇಳುತ್ತೆ.... ಅಂತ ರೇಗಿದ. ರೇಗಿದಾಗ ಸಾರ್ ಪಾರ್ ಉಪಯೋಗಿಸುವುದಿಲ್ಲ.

ಡೀಸೆನ್ಸಿ ಡೆಕೋರಾಂ ಮಾತಾಡಿದ ಅಧಿಕಾರಿ ಮುಖವನ್ನ ಮತ್ತೂ ಸಿಂಡರಿಸಿ ಅದೇನೋ ಹೇಳಲು ಹೊರಟ - ಅವನ ಪಕ್ಕದಲ್ಲಿ ಬಜ್ಜಿ ಚರ್ಚೆಯಲ್ಲಿ ಭಾಗವಹಿಸಿದ್ದವರು ಪರವಾನಗಿ ಪತ್ರಕ್ಕೆ ಸಹಿ ಹಾಕಿದರು. ಗೆಳೆಯ ಆಚೆ ಹೊರಟ. ಅಧಿಕಾರಿ ಕೊಠಡಿಯ ಬಾಗಿಲ ಬಳಿ ಬಂದು ಇಡೀ ಇಲಾಖೆಗೆ ಕೇಳುವ ಹಾಗೆ ಒಂದು ಚಿಕ್ಕ ಭಾಷಣ ನನ್ನ ಸ್ನೇಹಿತ ಹೊಡೆದ. "ಕೇಳ್ರಪ್ಪಾ ಕೇಳ್ರಿ ಇಲ್ಲಿ ಎಲ್ಲರೂ ತಿಮ್ಮಪ್ಪನಿಗೆ ದ್ವಾರಕಾನಾಥ್‌ಗೆ ಡೀಸೆನ್ಸಿ ಡೆಕೋರಾಂ ಬೇಕಂತೆ ನಾಳೆಯಿಂದ ಎಲ್ಲರೂ ಕೊಂಚ ಕೊಂಚ ಡೀಸೆನ್ಸಿ ಡೆಕೊರಾಂನ ಮನೆಯಿಂದ ತಂದು ಇವರಿಗೆ

ಕೊಡ್ರೀ ಪಾಪ ಬಾಳೆಕಾಯಿ ಬೋಂಡ ಹೇಗೆ ಮಾಡಬೇಕು ಅಂತ ಚಿಂತಿಸ್ತಿದಾರೆ... ಅಂದ,. ತಲೆಯನ್ನ ನಿಗುರಿಸಿಕೊಂಡು ಇಡೀ ಇಲಾಖೆಯ ನಗುವಿನ ಸಂಗಡ ಆಚೆ ಬಂದ, ಕಾರ್ಖಾನೆ ಆಚೆ ಸಹ ಹೋದ ಪರಿವಾರದೊಂದಿಗೆ ಕತೆ ಇಲ್ಲಿಗೇ ಮುಗಿದಿದ್ದರೆ ಸ್ವಾರಸ್ಯ ಇರುತ್ತಿರಲಿಲ್ಲ ಅಂತ ತೋರುತ್ತೆ (ತಿಮ್ಮಪ್ಪ ಮತ್ತು ದ್ವಾರಕಾನಾಥ್ ಬಜ್ಜಿ ಚಿಂತನೆ ನಡೆಸಿದ್ದ ಅಧಿಕಾರಿಗಳು)

ಇಡೀ ಮೂರು ತಿಂಗಳು ವಾರಕ್ಕೆ ಎರಡು ಬಾರಿ ಈತ ಈತನ ಪರಿವಾರದ ಸಂಗಡ ಇಡೀ ಕಾಲೋನಿ ಏರಿಯಾ ಸುತ್ತು ಹೊಡೆದರೂ ಒಂದೇ ಒಂದು ಬೀದಿನಾಯಿ ಸಿಗಲಿಲ್ಲ. ಅದರ ಬದಲಿಗೆ ನಾಯಿ ಕಾಟ ಜಾಸ್ತಿ ಆಗಿದೆ, ರಾತ್ರಿ ಹೊತ್ತು ಸೆಕೆಂಡ್ ಷಿಫ್ಟ್ ಮುಗಿಸಿ ಮನೆಗೆ ಹೋಗಬೇಕಾದರೆ ಅಟ್ಟಿಸಿಕೊಂಡು ಬರ್ತವೆ, ನಿನ್ನೆ ನನಗೆ ನಾಯಿ ಕಚ್ಚಿದೆ - ಊಟಿಗೆ ಕಳಿಸಿ ಅಲ್ಲಿ ಒಂದೇ ಇಂಜೆಕ್ಷನ್ ಕೊಡ್ತಾರಂತೆ ಇಲ್ಲೇ ಆದರೆ ಹದಿನಾಲ್ಕು ಇಂಜೆಕ್ಷನ್ ತಗೋಬೇಕು ಅಂಬಂತಹ ದೂರುಗಳು ಕೋರಿಕೆಗಳು ಅಧಿಕಾರಿಗೆ ಬರಲು ಆರಂಭ ಆಯಿತು.

ಹೀಗೇಕಾಯಿತು ಅಂತ ಅಧಿಕಾರಿಗೆ ತಳಮಳ ಶುರು ಆಯಿತು. ಗೆಳೆಯನನ್ನು ಕಛೇರಿಗೆ ಕರೆಸಿಕೊಂಡ. 'ಏನ್ರೀ ಮೂರು ತಿಂಗಳಿಂದ ಒಂದೇ ಒಂದು ನಾಯಿ ಸಹ ಹಿಡಿದಿಲ್ಲವಂತೆ ಯಾಕ್ರಿ? ಅಂತ ಕೇಳಿದ.

ನಾನೇನು ಮಾಡಲಿ ಸಾರ್? ಪ್ರತಿಸಲ ಕೇಜ್ ಒಯ್ತೇನೇ ನಾಯಿಗಳಿಂದ ದುರು ನಿಲ್ತೀನಿ, ''ಮಿ. ಡಾಗ್, ಮೆವೆ ರಿಕ್ವೆಸ್ಟ್ ಯುವರ್ ಹಿಯರಿಂಗ್ ಅಂತ ಕೇಳ್ತೀನಿ. ಕೆಲವು ನನ್ನ ನೋಡಿದ ಕೂಡಲೇ ಓಡುತ್ತವೆ. ಕೆಲವು ದೂರದಲ್ಲಿ ನಿಲ್ಲುತ್ತವೆ. ಮಿ. ಡಾಗು ಸಾರ್ ಯು ಆರ್ ಕಮ್ಮಿಟಿಂಗ್ ನ್ಯೂಯಿಸೆನ್ಸ್ ದಿಸ್ ಇಸ್ ನಾಟ್ ಗುಡ್ ಆನ್ ಯುವರ್ ಪಾರ್ಟ್ ಪ್ಲೀಸ್ ಎಂಟರ್ ದಿ ಕೇಜ್ ಐಯ್ಯಾಮ್ ದಿ ಡಾಗ್ ಸ್ಕ್ವಾಡ್ ಮ್ಯಾನ್ ಅಂತ ರಿಕ್ವೆಸ್ಟ್ ಮಾಡ್ಕೋತೀನಿ. ಎಷ್ಟೇ ಡೀಸೆನ್ಸಿಯಿಂದ ಡೆಕೊರಾಂನಿಂದ ಕೇಳಿದರು ಅವು ನನ್ನ ಕೋರಿಕೆಗೆ ಕೇರ್ ಮಾಡುಲ್ಲ, ಗಮನವೇ ನೀಡುಲ್ಲ, ಇಂತಹ ದೊಡ್ಡ ಫ್ಯಾಕ್ಟರೀಲಿ ನಿಮ್ಮಂತಹ ಹಿರಿಯರ ಜತೆ ಕೆಲಸ ಮಾಡುವುದರಿಂದ ನನಗೆ ಡೀಸೆನ್ಸಿ ಡೆಕೊರಾಮ್ ಬಿಟ್ಟು ಅವುಗಳನ್ನ ಅನಾಗರಿಕವಾಗಿ ಹಿಡಿದು ಕೊರಳಿಗೆ ಕುಣಿಕೆ ಹಾಕಿ ಎಳೆದು ತರಲು ಆಗುತ್ತಿಲ್ಲ. ನಾನೂ ನನ್ನ ಡೀಸೆನ್ಸಿ ಡೆಕೋರಾಮು ಮೇನ್‌ಟೇನ್ ಮಾಡಬೇಕು ಅಲ್ಲವಾ ಸಾಹೇಬ್ರೇ?...'' ಅಂತ ಈತ ಕೇಳಿದ ಈತನ ಮೀಸೆ ತುದಿ ಕುಣೀತಿತ್ತು,

ಕಣ್ಣಲ್ಲಿ ಅದೆಂತಹದೋ ಹೊಳಪಿತ್ತು. ಆದರೆ ಅಧಿಕಾರಿ ಟೊಮೇಟೋ ತರಹ ಕೆಂಪಗೆ ಆಗಿದ್ದ, ಮೂಗಿನಿಂದ ಬಿಸಿ ಬಿಸಿ ಹೊಗೆ ಬರುತ್ತಿತ್ತು. ಈ ಮಾತುಕತೆ ನಡೆಯಬೇಕಾದರೆ ಗೆಳೆಯ ಬೇಕೆಂದೇ ಬಾಗಿಲನ್ನ ಪೂರ್ತಿ ಮುಚ್ಚದೇ ಒಳ ಸೇರಿದ್ದ ಮತ್ತು ಆಚೆ ಕೂತಿದ್ದ ಇವನ ಸಹೋದ್ಯೋಗಿಗಳಿಗೆ 'ಹಿಂಟೂ' ಸಹ ನೀಡಿದ್ದನಂತೆ.

ಗೆಳೆಯನ ಮಾತು ಮುಗೀತಿದ್ದ ಹಾಗೆ ರೂಮಿನ ಆಚೆಯಿಂದ ಹೋ ಎಂಬ ನಗೆ ತೇಲಿಬಂತು. ಅಧಿಕಾರಿ ಮುಖ ಸಿಂಡರಿಸಿ ಕುರ್ಚಿಯನ್ನು ಕಾಲಿನಿಂದ ಒದ್ದು ಎದ್ದು ಆಚೆ ಹೊರಟ. 'ಏನ್ ಸಾರ್ ಹೀಗೆ ಒದೀತಿರಿ ಅದನ್ನ? ಹ್ಯಾವ್ ಸಂಡೀಸೆನ್ಸಿ ಡೆಕೊರಾಂ...' ಅಂತ ಈಗ ಹೇಳಿದ್ದು ಆತನಿಗೆ ಕೇಳಿಸಿತೊ ಇಲ್ಲವೋ ಈತನಿಗೆ ತಿಳಿಯದು. ಅರ್ಧ ಘಂಟೆ ನಂತರ ಈ ಅಧಿಕಾರಿ ಆತನ ಮೇಲಧಿಕಾರಿ ಇಬ್ಬರೂ ಬಂದು ಈತನಿಗೆ 'ಸಾರಿ' ಹೇಳಿದರು. ನಂತರದ ಮೂರೇ ದಿವಸದಲ್ಲಿ ಕಾಲೋನಿಯಲ್ಲಿ ನಾಯಿಕಾಟ ನಿಂತೇ ಹೋಯಿತು.

''ಕಾಲೋನಿಯಲ್ಲಿನ ನಾಯಿಗಳಿಗೆ ಡೀಸೆನ್ಸಿ ಡೆಕೊರಾಂ ಕಲಿಸಲು ಯತ್ನಿಸಿದ ಮೊದಲನೇ ನೌಕರ ನಾನು'' ಅಂತ ಗೆಳೆಯ ಹೆಮ್ಮೆಯಿಂದ ಹೇಳುತ್ತಾನೆ. ಮರು ನಿಮಿಷದಲ್ಲೇ ''ಬಟ್ ಐ ಫೈಲ್‌ಡ್ ಇನ್ ಮೈ ಮಿಷನ್'' ಎಂದೂ ಸೇರಿಸುತ್ತಾನೆ.

ಮನುಷ್ಯರಲ್ಲೇ ಡೀಸೆನ್ಸಿ ಮತ್ತು ಡೆಕೋರಾಂಗಳು ಅಲಭ್ಯವಾಗಿರುವ ಈ ಕಾಲದಲ್ಲಿ ಬೀದಿ ನಾಯಿಗಳಿಗೆ ಅದನ್ನು ಕಲಿಸಲು ಹೊರಟ ಈತನ ಬಗ್ಗೆ ಅಪಾರವಾದ ಅಭಿಮಾನವಿದೆ. ಈತನ ಸಂತತಿ ಬೆಳೆಯಲಿ ಎಂದು ಅನೇಕ ಬಾರಿ ಹಾರೈಸಿದ್ದೇನೆ! ನಮ್ಮಲ್ಲಿರುವ 'ಸೆನ್ಸ್ ಆಫ್ ಹ್ಯೂಮರ್' ಬಗ್ಗೆ ಸಂತೋಷಿಸಿದ್ದೇನೆ. ಇಂತಹ ಹ್ಯೂಮರ್ ಸೆನ್ಸ್ ಎಲ್ಲರಲ್ಲೂ ಇದ್ದರೆ ಕಾರ್ಖಾನೆ ನಡೀತಿತ್ತೇ ಎಂದೂ ಚಿಂತಿಸಿದ್ದೇನೆ. ಮರು ನಿಮಿಷವೇ ಹಾಸ್ಯಪ್ರಜ್ಞೆ ಇರುವುದರಿಂದಲೇ ಎಂತೆಂತಹ ದಡ್ಡ ದೊಡ್ಡ ಸಮಸ್ಯೆಗಳೂ ತಲೆ ನೋವುಗಲಾಗಿಲ್ಲ ಎಂದು ಅನಿಸಿದೆ. ಯಾರಾದರೂ ಡೀಸೆನ್ಸಿ ಡೆಕೊರಾಂ ಪದ ಉಪಯೋಗಿಸಿದರೆ ನಾಯಿಕತೆ ನೆನಪಿಗೆ ಬರುತ್ತೆ!

★★★

ವಿತರಣಾ ಸಮಾರಂಭ

– ರೋನಮಾರ್

ನೀವುಗಳೆಲ್ಲ ಇಲ್ಲಿಯವರೆಗೆ ಹಿಂದೆಂದೂ ನೋಡಿರದ ಮುಂದೆ ಆಗಾಗ ನೋಡುವ ಸೌಭಾಗ್ಯ ಹೊಂದಿದ, ಒಂದು ಅತ್ಯುತ್ತಮ ಒಂದು ದಿನದ ಅಂತರ್ ರಾಷ್ಟ್ರೀಯ ಕ್ರಿಕೆಟ್ ಪಂದ್ಯವನ್ನು ನೋಡಿದಿರಿ. ಈಗ ಪ್ಲೇಕಿಟ್ ಸಾದರಪಡಿಸುವ ಶ್ರೇಷ್ಠ ಎತ್ತಿ ಹಾಕಿದ ಕ್ಯಾಚಗಳು.

''ಶ್ರೇಷ್ಟ ಎತ್ತಿ ಹಾಕಿದ ಕ್ಯಾಚಗಳನ್ನು ನಿಮಗಾಗಿ ಪ್ರಸ್ತುತ ಪಡಿಸುವವರು ಪ್ಲೇಕಿಟ್, ಒಂದು ವಸ್ತುವಿಗೆ ಏಕೆ, ಒಂದು ಪಂದ್ಯಕ್ಕೆ ಹುಳು ಹತ್ತಿನಬಹುದಾದ 'ಪ್ಲೇಕಿಟ್' ಎಲ್ಲಾ ಪ್ರಮುಖ ಅಂಗಡಿಗಳಲ್ಲಿ ಲಭ್ಯ ಇಲ್ಲ ನಮ್ಮನ್ನು ಸಂಪರ್ಕಿಸಿ: 420-840-1680 - ದೇಶದಾದ್ಯಂತ ಸ್ಥಾನೀಯ ಕರೆಗಳ ದರದಲ್ಲಿಯೇ''

ಟಿಂಗ್ ಟಾಂಗ್

ಕ್ರೀಡಾಂಗಣಕ್ಕೆ ಮತ್ತೊಮ್ಮೆ ಸ್ವಾಗತ ಮೈದಾನದ ಮಧ್ಯದಲ್ಲಿ ನಡೆಯುವ ಬಹುಮಾನ ವಿತರಣಾ ಸಮಾರಂಭಕ್ಕೆ ನಿಮ್ಮನ್ನು ಕರೆದೊಯ್ಯುತ್ತಿದ್ದೇವೆ. ನಮ್ಮ ವಿಶೇಷ ವಿವರಣಾಕಾರ ಕವಿ ಮೇಸ್ತ್ರಿ ಅಲ್ಲಿದ್ದಾರೆ ಓವರ್ ಟು ಕವಿ.

ಕವಿಮೇಸ್ತ್ರಿ: ಹಲೋ ವೀಕ್ಷಕರೆ, ಇಲ್ಲಿಯವರೆಗೆ ಅತೀ ಅದ್ಭುತವಾದ ಪಂದ್ಯವನ್ನು ನೋಡಿದಿರಿ. ಇಂದಿನ ವಿತರಣಾ ಸಮಾರಂಭದಲ್ಲಿ ಅಂತರ್‌ರಾಷ್ಟ್ರೀಯ ಖ್ಯಾತಿ ಹೊಂದಿದ ಹಾಕೇಶ್ ಮಾರ್ಲ್ಲಾ, ಅವರ ಎಡಬದಿಗೆ, ಖಾಲಿ ವುಡ್‌ನ ನಟ ಶ್ರೇಷ್ಠ, ಕುಮಾರ ಚಿಕನ್ ಅವರ ಬಲಬದಿಗೆ ಅಂತರ್ ರಾಷ್ಟ್ರೀಯ ಕ್ರಿಕೆಟ್ ಬೆಟ್ಟಿಂಗ್ ಸಂಸ್ಥೆಯ ಭಾರತದ ಪ್ರತಿನಿಧಿ. ಚಂಜಯ ಸಾಪ್ಲಾ ಇದ್ದಾರೆ. ನಾನೀಗ ಇಂದಿನ ಪಂದ್ಯವನ್ನು ರೋಚಕವಾಗಿ ಸೋತ ತಂಡದ ನಾಯಕ ಶ್ರೀ ಡಾಲರ್ ಹಾಕರ್‌ರನ್ನು ವೇದಿಕೆಗೆ ಆಹ್ವಾನಿಸುತ್ತಿದ್ದೇನೆ. ಹಾಕೇಶಮಾರ್ಲ್ಲಾ ಇವರಿಂದ ಶ್ರೀಮಾನ್ ಡಾಲರ್ ಇವರು ಪ್ರಶಸ್ತಿ ಸ್ವೀಕರಿಸುವರು.

ಕವಿಮೇಸ್ತ್ರಿ: ಅಭಿನಂದನೆಗಳು ಹಾಕರ್, ಅಭೂತ ಪೂರ್ವವಾಗಿ ಮ್ಯಾಚ್ ಸೋತು ನಿಮಗೂ ನಿಮ್ಮ ತಂಡಕ್ಕೂ ಹೆಚ್ಚಿನ ಹಣ ಸಂಪಾದಿಸಿಕೊಟ್ಟಿರಿ.

ಡಾಲರ ಪಾಕರ್: ಹೌದೌದು ಐ, ಥಿಂಕ್ ನನ್ನ ನಿರೀಕ್ಷೆಯ ಮಟ್ಟಕ್ಕೆ ಹುಡುಗರು ಆಡಲಿಲ್ಲ. ಐ ಥಿಂಕ್, ಆರಂಭದ ಆಟಗಾರ 10 ರನ್ ಒಳಗೆ ವಿಕೆಟ್ ಒಪ್ಪಿಸಬೇಕಿತ್ತು ಅನಾವಶ್ಯಕವಾಗಿ 2 ರನ್ ಹೆಚ್ಚಿಗೆ ಗಳಿಸಿ, ಸುಮಾರು ಹಣದ ನಷ್ಟವಾಯಿತು, ಐ ಥಿಂಗ್ ಅದೇನು ಹೆಚ್ಚಿನ ಮೊತ್ತವಲ್ಲ. ಇಡೀ ತಂಡದ ಸದಸ್ಯರು ಸಂದರ್ಭಕ್ಕನುಗುಣವಾಗಿ, ವೈಡ್‌ಗಳನ್ನು ಎಸೆದು ಕ್ಯಾಚ್‌ಗಳನ್ನು ಎತ್ತಿಹಾಕಿ, ರನ್ / ಸ್ಟಂಪ್ ಔಟು ಆಗಿ, ಉತ್ತಮ ಪ್ರದರ್ಶನ ನೀಡಿ ಪ್ರೇಕ್ಷಕರ ಹಣಕ್ಕೆ ಸರಿಯಾದ ಮೌಲ್ಯ ಒದಗಿಸಿದರು. ಒಟ್ಟಿನಲ್ಲಿ ಐ, ಥಿಂಗ್ ಇದು ಇಡೀ ತಂಡದ ಸರ್ವತೋಮುಖಿ ಪ್ರಯತ್ನ.

ಕವಿಮೇಸ್ತ್ರಿ: ಧನ್ಯವಾದ ಡಾಲರ್, ಭವಿಷ್ಯದಲ್ಲಿಯೂ ಹಣ ಸಂಪಾದಿಸುವ ನಿಮ್ಮ ಯತ್ನ ಫಲಕಾರಿಯಾಗಲಿ

ಡಾಲರ್: ಧನ್ಯವಾದ

ಕವಿಮೇಸ್ತ್ರಿ: ಈಗ ಅತ್ಯುತ್ತಮ ಬೌಲರ್ ಪ್ರಶಸ್ತಿ, ಹತ್ತೇ ಓವರುಗಳಲ್ಲಿ ನೂರಕ್ಕೂ ಹೆಚ್ಚು ರನ್ನು ನೀಡಿ, ಪ್ರತಿಯೊಂದು ಓವರ್‌ನಲ್ಲಿಯೂ ಕನಿಷ್ಟ ಒಂದು ವೈಡ್, ಒಂದು ನೋ ಬಾಲ್ ಹಾಕಿದ ಶ್ರೀ ಗುಳುಂ ಗುಟುಕ್ ಕರ್ ಇವರಿಗೆ ಖಾಲಿ ವುಡ್‌ನ ನಟ ಕುಮಾರ ಚಿಕನ್ ಅವರು ಸ್ಮರಣ ಫಲಕ ನೀಡಲಿದ್ದಾರೆ. .... ಅಭಿನಂದನೆಗಳು ಗುಳುಂ ಅವರೆ, ದಾಖಲೆ ನಿರ್ಮಿಸಿದ ನೀವು...

ಗುಳುಂ ಗುಟುಕ್‌ಕರ್: ಧನ್ಯವಾದ, ಎಲ್ಲಾ ಶ್ರೇಯಸ್ಸು ತಂಡಕ್ಕೆ ಸೇರುತ್ತದೆ. ನಾನು ಎನ್ನುವ ಅಹಂಕಾರ ನನಗಿಲ್ಲ.

ಕವಿಮೇಸ್ತ್ರಿ: ಆದರೂ ಪ್ರತಿ ವೈಡ್, ಪ್ರತಿ ನೋಬಾಲ್‌ಗೆ ತಮಗೆ ಬಂದ ಸಂಪಾದನೆ....

ಗುಳುಂ: ಕ್ಷಮಿಸಿ ತಂಡದ ನಾಯಕ, ಮ್ಯಾನೇಜರ್ ಅಲ್ಲದೆ ನಾನು ಮಾತಾಡುವದು code of conduct ಗೆ ವಿರುದ್ಧ.

ಕವಿಮೇಸ್ತ್ರಿ: ಹೌದೇ ನೀವು ಶಿಸ್ತಿನ ಶಿಪಾಯಿ ಅಂದಂತಾಯಿತು. ಇರಲಿ ಈಗ ಈ ವಿತರಣಾ ಸಮಾರಂಭದ ಕೊನೆಯ ಹಂತಕ್ಕೆ ಬರುತ್ತಿದ್ದೇನೆ/ ಒಟ್ಟು 5 ಕ್ಯಾಚ್‌ಗಳನ್ನು ಬಿಟ್ಟು 'ಪಂದ್ಯ ಪುರುಷೋತ್ತಮ ಪ್ರಶಸ್ತಿ' ವೇದಿಕೆಯ ಮೇಲಿರುವ ಜನರು ಗಳಂತಹ ಸಮಿತಿ ಶ್ರೀ ಎತ್ತಿಹಾಕನ್ ಅವರನ್ನು ಸರ್ವಾನುಮತದಿಂದ

ಆಯ್ಕೆ ಮಾಡಿದೆ ಅವರೀಗ ಭಾರತೀಯ ಪ್ರತಿನಿಧಿ ಚಂಜಯಸ್ಲಾ ಅವರಿಂದ ಚೆಕ್ ಮತ್ತು ಫಲಕ ಸ್ವೀಕರಿಸುವರು... ಮಿ. ಎತ್ತಿ ಹಾಕನ್ ಒಂದು ನಿಮಿಷ.

ಎತ್ತಿ ಹಾಕನ್: ಓ ಬಂದೆ, ಬಂದೆ.

ಕವಿಮೇಸ್ತ್ರಿ: ಸುನಾಯಾಸವಾಗಿ 5 ಕ್ಯಾಚ್‌ಗಳನ್ನು ಬಿಟ್ಟು ವಿಶ್ವ ದಾಖಲೆಯ ಸಮಕ್ಕೆ ಬಂದಿರಿ. ಅಭಿನಂದನೆಗಳು ಇನ್ನೊಂದು ಕ್ಯಾಚನ್ನು ಬಿಟ್ಟು ದಾಖಲೆ ನಿರ್ಮಿಸಬಹುದಿತ್ತಲ್ಲ!

ಎತ್ತಿಹಾಕನ್: ಹೌದೌದು. ಆದರೆ ನಾನಾದರೂ ಏನು ಮಾಡಲಿ, ನಾನೆಷ್ಟು ಪ್ರಯತ್ನಿಸಿದರೂ ನನ್ನ ಸ್ಪೆಟ್ಟರ್‌ಗೆ ಸಿಕ್ಕಿದ್ದ ಬಾಲ್ ಕೆಳಗೆ ಬೀಳಲೇ ಇಲ್ಲ.

ಕವಿಮೇಸ್ತ್ರಿ: ಹೌದೇ! ನಿಮಗೆ ಬಹಳ ನಿರಾಶೆಯಾಗಿರಬೇಕು.

ಎತ್ತಿಹಾಕನ್: ಹಾಗೇನು ಇಲ್ಲ ಇದೆಲ್ಲ ಒಂದು ದಿನದ ಪಂದ್ಯದಲ್ಲಿ ಸಾಮಾನ್ಯ ಅದಕ್ಕೆ ನಮ್ಮ ಪೂರ್ವಿಕರು ಒಂದು ದಿನದ ಪಂದ್ಯ ಅನಿಶ್ಚಿತವಾದದ್ದು ಯಾವಾಗ ಯಾರ ಕಡೆ ವಾಲುತ್ತದೆಂದು ಹೇಳಲಾಗದು ಎಂದಿದ್ದರು.

ಕವಿಮೇಸ್ತ್ರಿ: ದಾಖಲೆ ಸಮಗೊಳಿಸಿದ್ದರೆ ಮತ್ತೊಮ್ಮೆ ಅಭಿನಂದನೆಗಳು ಮುಂದಿನ ಪಂದ್ಯಾವಳಿಯಲ್ಲಿ ನಿಮ್ಮ ಆಸೆ ಈಡೇರಲಿ ಎಂದು ಹಾರೈಸುತ್ತೇನೆ.

ಎತ್ತಿಹಾಕನ್: ಧನ್ಯವಾದ

ಕವಿಮೇಸ್ತ್ರಿ: ನನಗೆ ಭಯವಾಗುತ್ತಿದೆ ಸಜ್ಜನರೆ I, am afraid gentlemenನ ಕನ್ನಡ ರೂಪ ಇಲ್ಲಿಗೆ ಈ ವಿತರಣ ಸಮಾರಂಭದಲ್ಲಿ ಇಷ್ಟೇನೆ ಇರುವದು. ನಿಮ್ಮನ್ನು ಈಗ ಸ್ಟುಡಿಯೋಗೆ ವಾಪಸ್ಸು ಕರೆದೊಯ್ಯುತ್ತೇನೆ.

''ಈ ಪಂದ್ಯವನ್ನು ಪ್ರಸ್ತುತ ಪಡಿಸಿದವರು ''ಲಾಲ್ ಮಂಡ್ಯ' ಮಫತ್‌ರೇ, ಎಲ್‌ಪಿಬಿ, ಪ್ಲೇಕಿಟ್''

''ಇದು ನಕ್ಷತ್ರಾಟ ಸ್ಪೆನ್ ನವರ ಸಂಯುಕ್ತ ಪ್ರಸ್ತುತಿ''

ಟಿಂಗ್ ಟಾಂಗ್

★★★

.... ರೆ

– ಗುಂಡೂ ರಾವ್

ನಾನು ಮದುವೆ ಮಾಡಿಕೊಂಡಿರದಿದ್ದರೆ! ಹಾ! ಹಾ! ಎಂತಹ ರೋಮಾಂಚಕ ಯೋಚನೆ? ಹಾಗೆ ಯೋಚನೆ ಬಂದದ್ದೇ ತಡ, ನನ್ನ ಮನಸ್ಸಿನ ಮೇಲೆ ನೂರಾರು possibilities - alternatives etc., etc., ಪ್ರತ್ಯೇಕವಾಗಿ ಹಾಗೂ ಸಾಮೂಹಿಕವಾಗಿ ಲಗ್ಗೆ ಹಾಕಿದವು. ನನಗೆ ಯಾವ ಒಂದೇ ದಾರಿಯಲ್ಲಿ continuous ಆಗಿ ಯೋಚಿಸಲಾಗದೆ, confusion ನಲ್ಲಿ ತಬ್ಬಿಬ್ಬಾದೆ. ಯಾವ ದಿಕ್ಕಿನಲ್ಲಿ ಚಲಿಸುವುದು ಎಂದು ತೀರ್ಮಾನಿಸಲು ತಕ್ಷಣ ಅಸಾಧ್ಯವಾಯಿತು.

ಹತ್ತು ನಿಮಿಷ ಕೂತು ನನ್ನ ಮನಸ್ಸನ್ನು ಹತೋಟಿಗೆ ತರಲು ಸರ್ವ ಪ್ರಯತ್ನವನ್ನೂ ಮಾಡಿದೆ. ಕೊನೆಗೂ ಹತೋಟಿಗೆ ತಂದು ಕಡಿವಾಣ ಹಾಕಿ, ಒಂದೇ ದಾರಿಯಲ್ಲಿ, ದಿಕ್ಕಿನಲ್ಲಿ, ಶಾಂತಿಯಿಂದ ವಿಚಲಿತವಾಗದೆ ಮುನ್ನುಗ್ಗಲು ಅಣಿ ಮಾಡಿದೆ. ಮನಸ್ಸಿನ ತಹಕಹ ಕಮ್ಮಿಯಾಗಿ ಒಂದು ಕಪ್ ಕಾಫಿ ಮಾಡಿ, ಕುಡಿದು fresh ಆಗಿ ಕೂತ ಬರೆಯಲು ಅತಿ ಸಂತಸ, ಹುಮ್ಮಸ್ಸಿನಿಂದ.

ನಿಜವಾಗಿಯೂ ಹಾಗಿದಿದ್ದರೆ? ನನಗೆ ಮದುವೆಯೊಂದು ಆಗಿರದಿದ್ದರೆ? ಆಹಾ, ಎಂತಹ ಆಪ್ಯಾಯಮಾನವಾದ ಚಿಂತೆ.

ಮದುವೆ ಒಂದು ಆಗದಿದ್ದರೆ ಏನೆಲ್ಲಾ ಆಗುತ್ತಿತ್ತು? ನಾನೇನಾಗುತ್ತಿದ್ದೆ? ಎಲ್ಲಿರುತ್ತಿದ್ದೆ? ಊಹೆಗೇ ಮೀರಿದ possibilities.

ಇಂತಹ ಪರಿಸ್ಥಿತಿ ಇದ್ದಿದ್ದರೆ ಏನೇನಾಗುತ್ತಿತ್ತು ಎಂಬುದನ್ನು ಒಂದು order ನಲ್ಲಿ ಚಿಂತಿಸೋಣ.

ಈಗ ಅರವತ್ತಾಗಿ 'ಋಷಿಪಂಚಮಿ' ಆಗಿ ಹೋಗಿರುವ ವಯಸ್ಸಾಗಿರುವುದರಿಂದ ಆ 'ರೆ' ವಿಷಯ ಯೋಚಿಸಲು ಯಾವ ಆತಂಕವೂ ಇಲ್ಲ. ನನ್ನ ಮನಃಸ್ಥಿತಿಯನ್ನು rewind ಮಾಡಿ 37 ವರುಷಗಳ ಹಿಂದಕ್ಕೆ ತಿರುಗಿಸಿದೆ. "Flash Back' ತರಹ ಮುಖವನ್ನು ಆಕಾಶದ ಕಡೆಗೆ ತಿರುಗಿಸಿದ್ದೇ ತಡ real ಗಳು ಒಂದೊಂದಾಗಿ ಸುತ್ತಲು ಶುರು ಹಚ್ಚಿತು.

ಆಗಿನ್ನೂ 23ರ ಹರೆಯದ ಹುಡುಗ. full of enthusiasm, ವಿದ್ಯಾಭ್ಯಾಸ ಇನ್ನೂ ಪೂರ್ಣಗೊಂಡಿರಲಿಲ್ಲ, ಆಶಾವಾದ, ಧ್ಯೇಯವಾದ, ಸಾಹಸ ಪ್ರವೃತ್ತಿ,

ಇನ್ನೂ ಏನೇನೋ ತಲೆ ತುಂಬ ತುಂಬಿದ್ದ ಕಾಲ. ಎಲ್ಲ ವಿಷಯದಲ್ಲೂ ಆತುರ. ಮನಸ್ಸಿಗೆ ಬಂದಿದ್ದೇ ತಡ, ಮಾಡಿ ಮುಗಿಸಿ ಬಿಡಬೇಕೆಂಬ ಮನೋಭಾವ. ತಪ್ಪೋ - ರೈಟೋ, ಒಂದು "commit' ಮಾಡಿಕೊಂಡಿದ್ದನ್ನು ಏನಾದರೂ ಆಗಲಿ ಗುರಿ ಮುಟ್ಟಿಸಬೇಕೆಂಬ ಪಟ, ಇಂತಹ ಇರಬಾರದ ಬುದ್ಧಿ ಇದ್ದಿದ್ದರಿಂದಲೇ ಹೀಗೆ ಮದುವೆ ಆಗಿರುವುದು.

ವಿದ್ಯಾಭ್ಯಾಸದಲ್ಲಿ ಮುಂದಿದ್ದೆ. ಭವಿಷ್ಯ ಪ್ರಜ್ವಲವಾಗಿತ್ತು. 'ಮದುವೆ' ಅಂಬೋ ಒಂದು ಮಾಡಿಕೊಂಡು ಒಂದೇ ತಪ್ಪನ್ನು ಮಾಡಿ, ನಾನು achieve ಮಾಡಬಹುದಾದ್ದನ್ನೆಲ್ಲಾ ಹಾಳು ಮಾಡಿಕೊಂಡೆ.

ನಾನು ಓದುತ್ತಿದ್ದ ಕಾಲ, ಸುವರ್ಣ ಕಾಲ, ಈಗಿನಂತೆ ಹೊರ ದೇಶಕ್ಕೆ ವಲಸೆ ಹೋಗಲು ಪರದಾಟವಿಲ್ಲದ ಕಾಲ. ಹೋಗಬೇಕು ಅನ್ನಿಸಿದ ದೇಶಕ್ಕೆ "Just like that' ಹೋಗಬಹುದಾಗಿತ್ತು ನನ್ನಂತಹ qualification ಇದ್ದವರು. ಅಮೇರಿಕಾ, ಜರ್ಮನಿ, ಕೆನಡಾ ಮುಂತಾದ ದೇಶಗಳ ಬಾಗಿಲು ತೆರೆದು ಸ್ವಾಗತಿಸುತ್ತಿತ್ತು. ಯಾರು ಬೇಕಾದರೂ passport ಒಂದನ್ನು ಹಿಡಿದು, plane ticketಗೆ ಆಗುವಷ್ಟು ಹಣವನ್ನು ಒಟ್ಟು ಮಾಡಿ ಆ ದೇಶಗಳಿಗೆ ಹೋಗಬಹುದಿತ್ತು. ನನಗಿಂತ, ಅರ್ಹತೆಯಲ್ಲಿ, ಕೆಳಗಿದ್ದ ನನ್ನ ಸಹಪಾಠಿಗಳು 'ಮದುವೆ' ಎಂಬ ಬಾವಿಗೆ ಬೀಳದೆ ಹೊರಟೇ ಹೋದರು. ಹೋಗಿ 38 ವರುಷಗಳಾದುವು. ಈಗ ಅವರೆಲ್ಲರೂ ಹೊರ ದೇಶಗಳಲ್ಲಿ ನೆಲೆಸಿ ಏನೇನನ್ನೋ ಮಾಡಿದ್ದಾರೆ. ನಾನೂ ಹೋಗಬಹುದಾಗಿತ್ತು. ಆದರೆ ನನಗೆ ಮದುವೆ ಮಾಡಿಕೊಳ್ಳುವ ಆತುರ ಯಾರಿಗೆ ಬಿಡಲಿ? ಅವರೆಲ್ಲರೂ ಆ ತಪ್ಪು ಮಾಡದೆ ಮುಂದೆ ಬಂದರೆ ನಾನು ಮದುವೆಯ ದುಸ್ಸಾಹಸ ಮಾಡಿ ಹಿಂದೆ ಉಳಿದೆ. ಹಿಂದೂ ಸ್ಥಾನದಲ್ಲಿ.

ಮದುವೆಯೊಂದು ಆಗಿರದಿದ್ದರೆ!? ಮಕ್ಕಳೇ ಆಗುತ್ತಿರಲಿಲ್ಲ ಅಲ್ಲವೆ? ಮಕ್ಕಳೇ ಆಗಿರದಿದ್ದರೆ ಅವರನ್ನು ಬೆಳೆಸುವ ಪ್ರಮೇಯವೇ ಇರುತ್ತಿರಲಿಲ್ಲ. ಅವರ ಆರೋಗ್ಯಕ್ಕಾಗಿ ಪರಿತಪಿಸಬೇಕಾಗಿದ್ದಿರಲಿಲ್ಲ. ಅವರ ವಿದ್ಯಾಭ್ಯಾಸಕ್ಕಾಗಿ, ಸಂಪಾದಿಸಿದ್ದನ್ನೆಲ್ಲಾ ಸುರಿದು, ಅವರಿವರ ಕಾಲು ಹಿಡಿಯಬೇಕಾದ್ದಿರಲಿಲ್ಲ. ಇಷ್ಟೆಲ್ಲಾ ಮಾಡಿಯೂ ಅವರು ವಿದ್ಯಾಭ್ಯಾಸದಲ್ಲಿ ಕುಂಟಿದರೆ ಸಂಕಟ ಪಡಬೇಕಾದ್ದಿರಲಿಲ್ಲ. ಅವರ 'ಚಟ' ಗಳಿಗೆ ತೆತ್ತು ಸಾಕಬೇಕಾಗಿರಲಿಲ್ಲ. ಮಗಳಾದರೆ ಮದುವೆ ಮಾಡಿ ಪಾಡು ಪಡಬೇಕಾಗಿರಲಿಲ್ಲ. ಮಗ ಆದರೆ ಮದುವೆ ಮಾಡಿ, ಅವನನ್ನು ಕಳೆದುಕೊಳ್ಳಬೇಕಾಗಿರಲಿಲ್ಲ. ಓಹ್, ಜೀವನದ ಅರ್ಧ problems ಇರ್ತಿರಲಿಲ್ಲ.

ಎಲ್ಲ poiblems ಗೂ ಮೂಲಭೂತವಾದ ಹೆಂಡತಿ ಕಡೆಗೆ ಗಮನ ಹರಿಸಿ, ಅವಳನ್ನು ಸಂತೋಷವಾಗಿಡಲು ಸಾಯಬೇಕಾದ್ದಿರಲಿಲ್ಲ. ಅವಳ Whims and fancies ಗೆ ಕುಣಿಯಬೇಕಾದ್ದಿರಲಿಲ್ಲ. ಒಂದು ಮನೇನೆ ಮಾಡಬೇಕಾದ್ದಿರಲಿಲ್ಲ, ಅವಳಿಲ್ಲದಿದ್ದರೆ Insureance ಮಾಡಬೇಕಾದ್ದಿರಲಿಲ್ಲ, ಇನ್ನೊಬ್ಬರ ಸುಖಕ್ಕಾಗಿ.

Club ನಿಂದ, ಅಮಲ್‌ನೆಲ್ಲಾ ಇಳಿಸಿಕೊಂಡು ಮನೆಗೆ ಬರಬೇಕಾದ್ದಿರಲಿಲ್ಲ. Late night ಮೂವಿಸ್ ಮಿಸ್ ಮಾಡ್ಕೋಬೇಕಾಗಿರಲಿಲ್ಲ. ದಾರೀಲಿ ಹೋಗೋವಾಗ ಇನ್ನೊಂದು ಸುಂದರ ಹುಡುಗಿಯನ್ನು, ಸುಮ್ಮನೆ ಸಹ, ನೋಡದೆ ಇರಬೇಕಾಗಿರಲಿಲ್ಲ. Party ಲಿ, ಅಲ್ಲಿ, ಇಲ್ಲಿ, ಇನ್ನೊಂದು ಹೆಣ್ಣು ಪ್ರಾಣಿಯನ್ನು ಧೈರ್ಯವಾಗಿ ಮಾತಾಡಿಸಬಹುದಾಗಿತ್ತು. ಹೇಗೆ ಮಾಡಿದರೂ, ಹೇಗಿದ್ದರೂ, ನಮ್ಮನ್ನು ಸಂಶಯದಿಂದ ನೋಡೋರೆ ಇರ್ತಿರ್ಲಿಲ್ಲ. ನಮ್ಮ ಆತ್ಮಶಕ್ತಿ ಜಾಸ್ತಿಯಾಗುತ್ತಿತ್ತು.

ಒಟ್ಟಿನಲ್ಲಿ, ಎಲ್ಲಿ ಬೇಕಾದರೂ ಹೋಗಬಹುದಾಗಿತ್ತು, ಹೇಗೆ ಬೇಕಾದರೂ ಇರಬಹುದಾಗಿತ್ತು. ಸಂಪಾದಿಸಿದ್ದುದನ್ನು ನಮಗಿಷ್ಟ ಬಂದ ಹಾಗೆ ಉಪಯೋಗಿಸಬಹುದಾಗಿತ್ತು. ಹೆಂಡತಿ - ಅವಳಿಂದ ಬಂದ ಮಕ್ಕಳಿಗೋಸ್ಕರ ಹಾಗೆ ಮಾಡಿ, ಹೀಗೆ ಮಾಡಿ, ಸರ್ವಸ್ವವನ್ನು ಅವರಿಗೆ ಧಾರೆಯೆರೆದು, ಎರೆದ ಮೇಲೆ 'ಎರೆದೆ' ಅಂತ ಹೊಡ್ಕೋಬೇಕಾಗಿರ್ಲಿಲ್ಲ.

ಈ ಮದುವೆಯಿಂದ ಯಾರಿಗೂ ಪ್ರಯೋಜನ ಇಲ್ಲ. ಇದರಿಂದ ಸ್ವಾತಂತ್ರ್ಯ ಕಳೆದುಕೊಳ್ಳೋದರ ಜೊತೆಗೆ, ಎಷ್ಟೆಲ್ಲಾ ಕಷ್ಟನಷ್ಟ ಅನುಭವಿಸಬೇಕು.

ಎಲ್ಲದಕ್ಕಿಂತ ಹೆಚ್ಚಿಗೆ ಮದುವೆ ಆಗೋದು ಒಂದು ರೀತಿಯ ದೇಶ ದ್ರೋಹತನ ಅಂತ ನನ್ನ ಚಿಂತನೆ. ಸ್ವಾರ್ಥಕ್ಕಾಗಿ ಮದುವೆ ಆಗದಿದ್ದರೂ ದೇಶದ ಹಿತದೃಷ್ಟಿಯಿಂದಲಾದರೂ ಮದುವೆ ಆಗಬಾರದು. ಮದುವೆ ಆಗದಿರುವುದು ಪ್ರತಿಯೊಬ್ಬ ಜವಾಬ್ದಾರಿಯುತ ಹಾಗೂ ದೇಶ ಪ್ರೇಮಿಯ ಪ್ರಥಮ ಕರ್ತವ್ಯ ಅಂತ ನನ್ನ ಅನಿಸಿಕೆ.

ಮದುವೆ ಆದಮೇಲೆ, ನಮ್ಮ ಪೌರುಷ ಅಥವಾ ತಾಯ್ತನ ಪ್ರಪಂಚಕ್ಕೆ ಎತ್ತಿ ಹಿಡಿಯಲು ಮಕ್ಕಳನ್ನು ಮಾಡೇ ಮಾಡುತ್ತೇವೆ. ಹಾಗೆ ಸರ್ವ ಪ್ರಯತ್ನದಿಂದಲೂ ಮಕ್ಕಳಾಗದ ಪುಣ್ಯಾತ್ಮರನ್ನು ಈ ಸಮಾಜ 'ಬಂಜೆ' ಅಂತ ಜರಿಯುವುದು ಬಹಳ ಅನ್ಯಾಯ. ಅದು ಬಿಟ್ಟು ಅವರನ್ನು ಹೊಗಳಿ, ಹುರಿದುಂಬಿಸಿ, ಸಮಾಜ, ಸರ್ಕಾರ

ಅವರನ್ನು ಅಭಿನಂದಿಸಿ ಸನ್ಮಾನಿಸಬೇಕು, ಅವರು ಈ ದೇಶದ ಜನ ಭಾರ ಹೆಚ್ಚಾಗದಿರುವಂತೆ ಮಾಡಿದ್ದಾರೆ ಅಂತ.

ದೇಶದಲ್ಲಿ ಗಂಡು ಹೆಣ್ಣುಗಳ ಸಂಖ್ಯೆ ಸರಿಸಮಾನವಾಗಿದೆ ಅಂತ ಇಟ್ಕೊಳ್ಳಿ. ಕನಿಷ್ಟ ಪಕ್ಷ ಅದರಲ್ಲಿ ಪ್ರತಿಷ್ಠಿತ 50 ರಷ್ಟು ಗಂಡಸರು (?) ನನ್ನ ಬ್ರಹ್ಮಚಾರಿಗಳ ಪಾರ್ಟಿಗೆ ಸೇರಿ, ಅದರ ಮೂಲಭೂತ ಬುನಾದಿಯಾದ ನಿಜ 'ಬ್ರಹ್ಮಚಾರಿ' ತನದ ಪ್ರಣಾಳಿಕೆಗೆ ಬದ್ಧರಾಗಿ, ಮದುವೆ ಮಾಡಿಕೊಳ್ಳುವುದಿಲ್ಲ ಅಂತ ಇಟ್ಕೊಳ್ಳಿ, ಆಗ ಪ್ರತಿಷಿತ 50 ರಷ್ಟು ಹೆಣ್ಣುಗಳಿಗೂ ಮದುವೆ ಆಗೊಲ್ಲ ಅಲ್ಲವ? ಅಂದರೆ ಏನಾಯಿತು, ಪ್ರಜಾಸಂಖ್ಯೆಯಲ್ಲಿ ಒಟ್ಟು ಪ್ರತಿಷಿತ 50ರಷ್ಟು 'ಗಂಡಸರು - ಹೆಂಗಸರು' ಬ್ರಹ್ಮಚಾರಿಗಳಾಗೇ ಉಳಿಯುತ್ತಿದ್ದರು. ಹಾಗೆ ಆದ ಪಕ್ಷದಲ್ಲಿ 50% ಜನಸಮಖ್ಯೆ ಹೆಚ್ಚಾಗುವುದು ಕಮ್ಮಿಯಾಗುತ್ತಿತ್ತು. ಜೊತೆಗೆ ಜನ ಬಾಂಬ್ ಸಿಡಿತದಿಂದಲೂ, riots ಗಳಿಂದಲೂ, ಆಕಸ್ಮಿಕ ರೈಲು, ಬಸ್ ಅಪಘಾತದಂತಹ ಸಾಮೂಹಿಕ ಹತ್ಯೆಗಳಿಂದಲೂ, ಆತ್ಮಹತ್ಯೆ, ಕೊಲೆ ಮುಂತಾದ ಬೇರೆ ಬೇರೆ ವಿಧಗಳಿಂದ ಸಾಯುತ್ತಿರುವುದರಿಂದ ಜನಸಂಖ್ಯೆ ಕಮ್ಮಿಯಾಗುತ್ತಾ ಹೋಗುತ್ತಿತ್ತು. ಇದು ಒಂದು ರೀತಿಯ continuous process ಆದ್ದರಿಂದ "snow ball' (ಉರುಳಿದ ಮಂಜಿನ ಗಡ್ಡೆ ಬೆಳೆಯುವಂತೆ) effect ನಿಂದ ಜನಸಂಖ್ಯೆ ಒಂದು ರೀತಿಯ ಹತೋಟಿಗೆ ಸಿಕ್ಕುತ್ತಿತ್ತು.

ನಿಜವಾಗಿಯೂ ಹಾಗೆ ಆದ ಪಕ್ಷದಲ್ಲಿ ನೀವೇ ಯೋಚಿಸಿ ನಮ್ಮ ದೇಶ ಹೇಗಿರುತ್ತಿತ್ತು ಅಂತ, ಸುಭಿಕ್ಷವಾಗುತ್ತಿತ್ತು. ಇರೋರಿಗೆ, ಇರಲು, ತಿನ್ನಲು ಜಾಗ ಇರ್ತಿತ್ತು. ಮಕ್ಕಳಿಗೆ seat ಸಿಕ್ಕುತ್ತಿತ್ತು, ಬಸ್, ರೈಲುಗಳಲ್ಲಿ ಜಾಗ ಸಿಕ್ತಿತ್ತು, ನೀರು ಸಿಕ್ತಿತ್ತು. ಈಗಿರುವ ಎಲ್ಲ ಸೌಲಭ್ಯ ಸವಲತ್ತು ಸುಖವಾಗಿರಲು ಸಾಕಾಗುತ್ತಿತ್ತು.

ಮೇಲಿನಂತಹ ಪರಿಸ್ಥಿತಿಗೆ ಬರಲು, ಏನೆಲ್ಲಾ ಮಾಡೋದು ಬಿಟ್ಟು ಮದುವೆ ಆಗೋದನ್ನು ಒಂದು ಬಿಟ್ಟರೆ ಸಾಕು. ನಾವು ಉದ್ಧಾರ ಆಗ್ತೀವಿ. ದೇಶಾನೂ ಉದ್ಧಾರ ಆಗುತ್ತೆ.

ಇನ್ನೊಂದು ವಿಷಯ ಯೋಚಿಸಿ ನೋಡಿ. ಜಗತ್‌ಗುರು ಶಂಕರಾಚಾರ್ಯರು, ಮಹಾನ್ ಹಿಂದೂ ಸನ್ಯಾಸಿ ಸ್ವಾಮಿ ವಿವೇಕಾನಂದ, ಅವರುಗಳು ಬ್ರಹ್ಮಚಾರಿಗಳಾದ್ದರಿಂದಲೇ ಅಲ್ಲವೇ ಮಾನವ ಕುಲಕ್ಕೆ ದಾರಿದೀಪಗಳಾಗಿದ್ದು? ಮದುವೆ ಆದರೂ ಬ್ರಹ್ಮಚಾರಿಯೇ ಆಗಿ ಉಳಿದ

ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರು ದೇವರನ್ನು ಕಂಡವರಲ್ಲವೆ? ದೇಶ ಸೇವೆಗಾಗಿಯೇ ಅವತರಿಸಿರುವ ಅಟಲ್‌ಜಿ, ಹಾಗೂ ಜಯಲಲಿತಾಜಿ ಇವರುಗಳು ಬ್ರಹ್ಮಚಾರಿಗಳಾಗಿಯೇ ಉಳಿದಿಲ್ಲವೇ?

ಮೇಲಿನ ನಿದರ್ಶನಗಳಿಂದ ಸರ್ವವಿದಿತವಾಗುವ, ಮುಖಕ್ಕೆ ಒಂದು ರಾಚುವ ಸತ್ಯ ಅಂದರೆ, ಮದುವೆ ಆಗದಿರುವುದರಿಂದ ಸ್ವಂತಕ್ಕೇ ಅಲ್ಲದೆ, ಇಡಿ ವಿಶ್ವಕ್ಕೆ ಒಳ್ಳೆಯದನ್ನು ಮಾಡಿದಂತಾಗುತ್ತದೆ. ವಿಶ್ವಜ್ಞಾನಿ ಸಾಕ್ರೆಟೀಸ್ ಹಾಗೂ ನಮ್ಮ ಶ್ರೀರಾಮ ಮದುವೆ ಮಾಡಿಕೊಂಡು ಪಟ್ಟ ಪಾಡು ನಮಗೆ ಉದಾಹರಣೆಯಾಗಬೇಕು. ಮದುವೆ ಒಂದು ಆಗದಿದ್ದರೆ ಸಾಕ್ರೆಟೀಸ್ ಪ್ರಪಂಚಕ್ಕೆ ಏನೆಲ್ಲಾ ಹೇಳುತ್ತಿದ್ದ. ಶ್ರೀರಾಮ ಕಾಡಿನಿಂದ ಹಾಯಾಗಿ ವಾಪಸ್ ಬಂದು ರಾಜ್ಯವಾಳುತ್ತಿದ್ದ. ಅವನಿಗೆ ಹೆಂಡತಿಯೇ ಇಲ್ಲದಿದ್ದಿದ್ದರೆ, ಅವಳನ್ನ ರಾವಣ kidnap ಮಾಡೋಕೆ ಆಗ್ತಾ ಇರ್ಲಿಲ್ಲ, ಯುದ್ಧಾನೇ ಆಗ್ತಿರ್ಲಿಲ್ಲ, ಆ 'ರಾಮಾಯಣ' ರಾಮಾಯಣಾನೇ ಆಗ್ತಾ ಇರ್ಲಿಲ್ಲ.

ನಮ್ಮ ಸರ್ವಮಾನ್ಯ ದೇವರುಗಳಾದ ದೇವರುಗಳು ಯಾರು ಹೇಳಿ, ಬ್ರಹ್ಮಚಾರಿಗಳಾದ ಗಣೇಶ ಮತ್ತು ಮಾರುತಿ ಅಲ್ಲವೆ? ಅವರುಗಳು ಬ್ರಹ್ಮಚಾರಿಗಳಾಗಿರುವುದರಿಂದಲೇ ಅಷ್ಟು popular ಆಗಿರೋದು ಮತ್ತು ಭಕ್ತರನ್ನು ಕಾಪಾಡಲು ಸಮಯ ಇರೋದು. ಅವರಿಗೂ ಮದುವೆ, ಮಕ್ಕಳು ಆಗಿದ್ದರೆ ನಮ್ಮನ್ನ ಕೇಳೋ ದೇವರು ಯಾರು ಇರ್ತಿದ್ದರು?

ಮದುವೆ ಒಂದು ತರಹ ಕಡಿವಾಣ ನಮ್ಮ ಸ್ವಾತಂತ್ರ್ಯಕ್ಕೆ. ಎಷ್ಟೋ ಮಂದಿ, ಮದುವೆಗೆ ಮುಂಚೆ ಒಂದು ರೀತಿ ಇದ್ದರೆ ಮದುವೆ ಆದ ನಂತರ ಬಹಳ ಮಾರ್ಪಾಟಾಗ್ತಾರೆ. ಮದುವೆ ನಮ್ಮ characterನೇ change ಮಾಡಿ ಬಿಡುತ್ತೆ. ನಮ್ಮ attitude, ನಮ್ಮ style of living ನೇ ಬದಲಾಯಿಸಿ ಬಿಡುತ್ತೆ.

ಮದುವೆ ಎಂಬ ಒಂದು ತಪ್ಪನ್ನು ಮಾಡದಿದ್ದರೆ ಸ್ವಂತಕ್ಕೆ ಹಾಗೂ ದೇಶಕ್ಕೆ ಆಗುವ ಉಪಯೋಗಗಳನ್ನು ಮೇಲೆ ವರ್ಣಿಸಿದ್ದಾಗಿದೆ. ನಿಮಗೂ ನೀವು ಮಾಡಿದ್ದು ತಪ್ಪು ಎನಿಸಿರಬೇಕು. ಮದುವೆ ಆಗಿದ್ದರೆ, ಮದುವೆ ಆಗಿರದಿದ್ದರೆ ನಿಮಗೆ ಈ ಲಿಖಿತ ನಿಮ್ಮ ಕಣ್ಣನ್ನು ತೆರೆಸಲಿ. ಮುಂದೆ ಆಗಬಹುದಾದ ಅನಾಹುತದಿಂದ ನಿಮ್ಮ ಪಾರು ಮಾಡಲಿ ಎಂದು ಪ್ರಾರ್ಥಿಸುವೆ.

★ ★ ★

ಅವಲಕ್ಕಿ-ನಾನು-ಅತ್ರಿ

ಬಾರೂರು ಮಾರ್ಕಂಡೇಯ



ಅಮ್ಮಾ ಮಾರ್ಕಂಡೇಯ ಮಾಮ ಬಂದ್ರು..... ಬಾಮ್ಮ ನೋಡು ಮತ್ತೆ.... ಎಂದು ವಿರಂಚಿ ಮನೆಯ ಒಳಗಡೆ ಓಡಿದ, ಮತ್ತೆ ಒಳಗಿನಿಂದ ಓಡೋಡಿ ಬಂದು, ಮಾವು, ಮಾವು ಚಿತ್ರ ಬರೆದುಕೊಡ್ತೀಯ? ಮಾಮ ನಾನು ಬರೆದಿದ್ದೇನೆ ನೋಡು ಎಂದು ಒಂದಷ್ಟು ಗೆರೆಗಳ ಎಳೆದು ಆಕಾರಗೊಳಿಸಿದ್ದ ಗೀಚುರೇಖೆಯ ಚಿತ್ರಗಳನ್ನು ತೋರಿಸುತ್ತಾ ಮಾಮ ಇಲ್ಲಿ ನೋರುಮಾಮ... ಇದು ಕ್ಯಾಟ್ ಇದು ಹೌಸ್... ಎಂದು ಮುದ್ದು ಮುದ್ದಾಗಿ ಮಾತನಾಡುತ್ತಾ ತೊಡೆಯನೇರಿದ್ದ ಆ ಪುಟ್ಟ ಚಿಣ್ಣರನಿಗೆ ''ಡ'' ಅಕ್ಷರದ ಉಚ್ಚಾರ ಬರದೆ ''ರ'' ಉಚ್ಚರಿಸುತ್ತಿದ್ದ, ಪಟಪಟನೆ ಅರಳು ಹುರಿದ ಹಾಗೆ ಮಾತನಾಡುವುದ ನೋಡಿದರೆ ಎಂತವರಿಗೂ ಆಚ್ಚರಿಯೆನಿಸುತ್ತಿತ್ತು. ಅಷ್ಟರಲ್ಲಿ ವತ್ಸಲಾರವರು.. ಬರುತ್ತಾ.. ಮಾವು ಅವರನ್ನು ಗೋಳು ಹೊಯ್ದು ಕೊಳ್ಳಬೇಡ ಕಣೋ....ಯಾವಾಗ್ಲೂ ಹೀಗೆ ಇವನು .... ಸ್ವಲ್ಪ ಹೊತ್ತು ಬಂದು ಬಿಡ್ತಾರೆ ಸ್ನಾನ ಮಾಡ್ತಿದ್ದಾರೆ, ಎಂದು ಹೇಳಿ ಬಿಸಿ ಬಿಸಿಯಾಗಿ ಉದ್ದನೆಯ ಸ್ಟೀಲ್ ಲೋಟದಲ್ಲಿ ಘಮ ಘಮಿಸುವ ಕಾಫಿ ತಂದು ಕೊಟ್ಟರು. ಅಷ್ಟರಲ್ಲಿ ಅತ್ರಿ ಹೊರಬಂದರು. ಮೈ ಮೇಲೆ ಬಿಸಿನೀರಿನ ಆವಿ... ಹೊಗೆಯಾಡುತ್ತಿತ್ತು. ಏನ್ ಕವಿ ಮಹಾಶಯರವರು ಬೆಳಿಗ್ಗೇನೆ ಬರೋಣವಾಗಿದೆ ಎಂದು ನಕ್ಕರು... ವತ್ಸಲಾ ಕಲಾವಿದರಿಗೆ..ಅವಲಕ್ಕಿ ರೆಡಿ ಇಟ್ಟಿದೀಯ ತಾನೆ... ಎನ್ನುತ್ತಲೇ ವತ್ಸಲಾ ನಗಲಾರಂಭಿಸಿದರು. ಅವರ ಜೊತೆ, ನಾನೂ ನಕ್ಕೆ.... ಆ ನಗು ಏಕೆ ಎಂಬುದು ನಮಗಷ್ಟೇ ತಿಳಿದಿತ್ತು.

ಅತ್ರಿಯವರ ಬಗ್ಗೆ ಅಪಾರವಾದ ಅಭಿಮಾನವನ್ನು ಇಟ್ಟುಕೊಂಡವ ನಾನು. ಅವರ ಮನೆಗೆ ಹೋಗುವಾಗಲೆಲ್ಲ ಏನಾದರೊಂದು ವಿಷಯಕ್ಕೆ ಸಂಬಂಧಿಸಿದಂತೆ (ಚಿತ್ರ, ಕವಿತೆ, ಹಾಡು, ಸಂಗೀತ) ಅವರೊಡನೆ ಮಾತನಾಡಿ ನನ್ನ ಅನುಮಾನಗಳ ಪರಿಪರಿಸಿಕೊಳ್ಳುತ್ತಿದ್ದೆ....ಹಾಗೆಯೆ ಅತ್ರಿಯವರು ಎಂದೂ ನನಗೆ ನಿರಾಸೆಯನ್ನುಂಟು ಮಾಡಿರಲಿಲ್ಲ - ಎಷ್ಟೇ ಕೆಲಸಗಳ ಒತ್ತಡವಿದ್ದಾಗ್ಯೂ ಒಂದೆರಡು ನುಡಿಯನ್ನಾದರೂ ಹೇಳುತ್ತಿದ್ದರು. ಹೀಗೆ ನನ್ನ ಅವರ ಸ್ನೇಹ ವಿಶ್ವಾಸ ದಿನೇ ದಿನೆ

ಗಾಢವಾಗುವ ದಿನಗಳಲ್ಲಿ ಒಂದು ದಿನ, ಕಛೇರಿಗೆ ಹೋಗುವುದಕ್ಕಿಂತಲೂ ಮುಂಚೆ ಅತ್ರಿಯವರ ನೋಡಿ ಹೊಸತಾಗಿ ಬರೆದಿರುವ ಕವಿತೆಯೊಂದನ್ನು ಅವರಿಗೆ ಕೊಟ್ಟು- ಆ ಕವಿತೆಯ ಬಗ್ಗೆ ಅವರ ಅಭಿಪ್ರಾಯ ತಿಳಿಯುವ ಎಂದು ಅವರ ಮನೆಗೆ ಬಂದಾಗ 9-45 ಆಗಿತ್ತು. ಅತ್ರಿಯವರೂ ಯಾವುದೋ ಕೆಲಸದ ತರಾತುರಿಯಲ್ಲಿದ್ದರೆಂಬುದನ್ನು ಅವರ ಗಡಿಬಿಡಿಯಿಂದ ತಿಳಿದುಕೊಂಡೆ. ಆದರೂ ಕವಿತೆ ಕೊಟ್ಟೆ...ಅಷ್ಟರಲ್ಲೆ ವತ್ಸಲಾರವರು ಅವಲಕ್ಕಿಯ ಪ್ಲೇಟಿಡಿದು ನಿಂತಿದ್ದರು. ತಗೊಳ್ಳಿ ಎಂದು ಕಾಫಿ ಹಾಗೂ ಅವಲಕ್ಕಿ ಕೊಟ್ಟರು... ಕವಿತೆ ಬಗ್ಗೆ ಮಾತನಾಡುವುದೋ ಅವಲಕ್ಕಿ ತಿನ್ನುವುದೋ..... ಅತ್ರಿ ಹೊರಟುಹೋದರೆ....? ಆದದ್ದಾಗಲಿ ಅವಲಕ್ಕಿ ತಿನ್ನುತ್ತಲೇ ಕವಿತೆ ಹೇಳುವ.... ಎಂದು ನಿರ್ಧರಿಸಿ ಅವಲಕ್ಕಿ ತಿನ್ನತೊಡಗಿದೆ (ಅವಲಕ್ಕಿ ನನಗೆ ಪ್ರಿಯವಾದ ತಿಂಡಿ. ಎರಡು ಕಾರಣಕ್ಕೆ ಒಂದು - ಕೃಷ್ಣನಿಗೆ ಮೆಚ್ಚಿನದೆಂದಾದರೆ, ಎರಡು ಅದೇಕೋ ಅದರ ಮೇಲೆ ನನ್ನ ಪ್ರೀತಿ ಎಂಬ ಕಾರಣಕ್ಕೆ)

ಮೊದಮೊದಲು ಜೋರುಜೋರಾಗಿ ಅಗಿಯ ತೊಡಗಿದ ಹಲ್ಲಿನ ದವಡೆಗಳು ಕ್ರಮೇಣ ತಮ್ಮ ಸ್ಪೀಡನ್ನು ಹಲವು ವರ್ಷಗಳ ಕಾಲ ಎಣ್ಣೆ ಕಾಣದ ಯಂತ್ರದಂತೆ ನಿಧಾನವಾಗ ತೊಡಗಿದವು. ಹಾಗೆಂದು ನಾನು ಹಲ್ಲನ್ನು ಉಜ್ಜಿರಲಿಲ್ಲ ಎಂದು ತಪ್ಪು ಭಾವಿಸಬಾರದು, ಕೊನೆಕೊನೆಗೆ ದವಡೆ ಮುಷ್ಕರವನ್ನೆ ಆರಂಭಿಸಿಬಿಟ್ಟವು ಎಂದರೂ ತಪ್ಪಾಗದು.... ಇನ್ನು ಮಾತನಾಡಲೆ ಆಗುತ್ತಿಲ್ಲವೆಂದ ಮೇಲೆ ಕವಿತೆ ಹೇಳಲು ಸಾಧ್ಯವೆ? .... ಅತ್ರಿಯವರು ಹೊರಟರೆ? ಅವಲಕ್ಕಿ ತಟ್ಟೆಯಲ್ಲಿ ಅರ್ಧದಷ್ಟು ಹಾಗೇ ಇದೆ. ಬಿಟ್ಟರೆ...ತಪ್ಪಾಗಿ ಭಾವಿಸುವರೋ ಏನೋ ... ಅವಲಕ್ಕಿ ತಟ್ಟೆಯಲ್ಲಿ ಬಿಡುವುದು ಒಳ್ಳೆಯದಲ್ಲವೆಂಬ - ಹಿರಿಯರ ನುಡಿ ನನ್ನ ಎಚ್ಚರಿಸಿ ಭಯಗೊಳಿಸಿದೆ. ನಾನು ಕಣ್ಣುಕಣ್ಣು ಬಿಟ್ಟು ತಿನ್ನುವುದನ್ನು ನೋಡುತ್ತಿದ್ದ ಅತ್ರಿ ಹಾಗೂ ವತ್ಸಲಾ ನನ್ನ ನೋಡಿ ನಗತೊಡಗಿದರು... ನೋಡೇ ವತ್ಸಲಾ ಇನ್ನು ಮೇಲೆ... ಮಾರ್ಕಾಂಡೇಯ ಮನೆಗೆ ಬಂದಾಗಲೆಲ್ಲ ಅವಲಕ್ಕಿಯನ್ನು ಕೊಡಬೇಕು- ಒಂದಷ್ಟು ರೆಡಿಯಾಗಿ ಇಟ್ಟಿರು ಎಂದು ಹೇಳಿದ್ದರು, ಅವಲಕ್ಕಿ ತಿನ್ನುತ್ತ ಮಾತನ್ನಾದರೂ ಕಡಿಮೆ ಮಾಡಿಯಾನು ಎಂದು ಗಂಡ ಹೆಂಡತಿ ನಗುತ್ತಿರುವುದ ನೋಡಿ ನಾನೂ ನಗತೊಡಗಿದೆ. ಆ ಅವಲಕ್ಕಿ ನಗೆ ಪ್ರಸಂಗ ಪ್ರಸ್ತಾಪವಾದಾಗಲೆಲ್ಲ - ನಾವು ನಗುತ್ತಿದ್ದೆವು. ಅತ್ರಿಯವರ ಮನೆಗೆ ಹೋದಾಗಲೆಲ್ಲ ಅವರ ಮನೆಯಲ್ಲಿ ಬೇರೇ ಏನೇ ತಿಂಡಿ ಮಾಡಿದ್ದರೂ ತಮಾಷೆಗಾಗಿ ಅತ್ರಿಯವರು ಅವಲಕ್ಕಿ ಕೊಡೆ ಎನ್ನುತ್ತಿದ್ದರು.. ನಗುತ್ತಿದ್ದೆವು ಮತ್ತೆ ಈಗಲೂ ನೆನಪಾಗುತ್ತದೆ - ನಗುವಿಗೆ ಬದಲಾಗಿ ಕಣ್ಣು ಹನಿಗೂಡುತ್ತವೆ, ಅವಲಕ್ಕಿ ತಿನ್ನ ಬೇಕೆನಿಸಿ ಅವರ ಮನೆಗೆ ಹೋದರೂ ಅವಲಕ್ಕಿ ಕೊಡಲು ಯಾರಿದ್ದಾರೆ, ವತ್ಸಲಾ, ಅತ್ರಿ, ವಿರಂಚಿ ನನ್ನ ಜೊತೆ ಹಾಗೆ ನಗುತ್ತಾರಾ? ಬರೀ ನೆನಪಷ್ಟೇ ನನ್ನ ಜೊತೆಗೆ.

ಹಿಂದುಸ್ಥಾನದಲ್ಲಿ

ಯಾಕೆ ಇವೆ - ಯಾಕೆ ಇಲ್ಲ

- ಶಿವರಾಮ ಕಾರಂತ

ಪ್ರತಿಯೊಂದು ಪ್ರಾಣಿಯ ಮುಂದೆಯೂ ''ಯಾಕೆ ಇಲ್ಲ'' ಎಂದು ಓದುವುದು

ಜಿರಾಫೆ - ನಮ್ಮ ದೇಶದಲ್ಲಿ ಸುದ್ದಿಗಳೂ, ರಹಸ್ಯಗಳೂ, ಅಷ್ಟು ಬಹಿರಂಗವಾಗಿ ಪ್ರಚಾರವಾಗುತ್ತಿರುವಲ್ಲಿ, ಉದ್ದ ಕತ್ತು ಮಾಡಿಕೊಳ್ಳುವ ಅವಶ್ಯಕತೆಯೇನು?

ಚಿಂಪಾಂಜಿ - ನಮ್ಮ ಆಯುಷ್ಯವೆಲ್ಲ ಅನುಕರಣೆಯಲ್ಲಿ ಕಳೆದಿದೆ, ಅಂತವರಿಗೆ ಚಿಂಪಾಂಜಿ ಏನು ಹೇಳಿಕೊಟ್ಟೀತು?

ತಿಮಿಂಗಿಲ - ನೀರಲ್ಲಿದ್ದು ಅದು ಮಾಡುವಷ್ಟೆ ಕೆಲಸವನ್ನು ನೆಲದಲ್ಲಿರುವ ನಮ್ಮ ಸಾಹುಕಾರರು ಮಾಡುವಾಗ?

ಉಷ್ಟ್ರಪಕ್ಷಿ - ಬರಿಯ ಬಿರುಗಾಳಿಗೆ ತಲೆಯನ್ನು ರೆಕ್ಕೆಯ ಎಡೆಯಲ್ಲಿ ಮರೆಯಿಸಿಕೊಳ್ಳುವುದು ಅದು. ನಮ್ಮ ದೇಶದ ಪಂಡಿತರು ಎಂತಹ ಕ್ರಾಂತಿಗೂ ಆಧುನಿಕ ವಿಚಾರಕ್ಕೂ ಅಂಥ ಶ್ರದ್ಧೆಯ ಎಡೆಯಲ್ಲಿ ತಲೆ ಮರೆಯಿಸಿಕೊಳ್ಳಬಲ್ಲವರಾಗಿರುವಾಗ...?

ಚಮರಿ - ಬ್ಲೇಡಿಗೆ ಬರಗಾಲ ಬಂದ ಈ ಯುಗದಲ್ಲಿ ಜನರೊಡನೆ ತನ್ನ ಗುರುತು ಸಿಗಲಾರದೆಂದು.

ಹಿಪ್ಪೋಪೊಟಾಮಸ್ - ಕಂಬುಕಂಠನೇ ಆದರ್ಶವಾಗಿರುವವರಿಗೆ ತುಂಬು ಕಂಠನಾದ ಅದರ ಮೇಲೆ ಗೌರವಬಾರದೆಂದು.

★ ★ ★

(ಪ್ರತಿಯೊಂದರ ಮುಂದೆಯೂ 'ಯಾಕೆ ಇದೆ' ಎಂದು ಓದುವುದು)

ಕತ್ತೆಕಿರುಬ - ಉಚ್ಛಿಷ್ಠ ತಿಂದು ಬದುಕುವ ಜನರು ತನ್ನಿಂದಲೇ ಅದನ್ನು ಕಲಿತಿರಬೇಕೆಂಬ ಹಿರಿತನದ ಹಿಗ್ಗಿನಿಂದ.

ಹುಲಿಮೀನು - ಬಡವನಿಗೆ ಕಾಡು, ನಾಡು, ನೀರು ಒಂದೇ ತರನಾಗಲೆಂದು ಕಾಡಿಗೆ ಹೋದರೆ ಪಟ್ಟೆಹುಲಿ, ನಾಡಿಗೆ ಬಂದರೆ ಬಟ್ಟೆ ಹುಲಿ, ನೀರಿಗೆ ಇಳಿದರೆ ಮೀನೇ ಹುಲಿ.


ಖಡ್ಗಮೃಗ - ಅಣಕ, ವಿಮರ್ಶೆಗಳ ಪಾಲಿಗೆ ತನಗೆ ಸಮಜ್ಞಾತಿಗಳು ತುಂಬಾ ಇರುವರೆಂದು.

ಹೆಗ್ಗಣ - ಬೂದಿ ಬಣ್ಣ ಸವರಿ, ಪರಾನ್ನ ಭುಂಜಿಸುವ ಸಾಧುಗಳಿಗೆ ಈ ದೇಶದಲ್ಲಿ ಹೆಚ್ಚಿನ ಮನ್ನಣೆಯೆಂದು.

ದಾಸರ ಹಾವು - ಉದ್ಯೋಗವಿಲ್ಲವಾದರೂ, ಹಣೆ ತುಂಬ ತಿಲಕವಿಡುವ ದಾಸರಿಗೆ ಮನ್ನಣೆಯುಂಟೆಂದು.

ಕತ್ತೆ - ಸಿನಿಮಾ ಸಂಗೀತ ಕೇಳಲು ಜನಗಳ ಕಿವಿ ಸಾಲದೆಂದು

ಬಾವಲಿ - ಹಳೆಯ ಗುಡಿಗಳನ್ನು ಗುಡಿಸುವವರಿಲ್ಲದೆ ಹೋದರೂ ಹೊಸ ಗುಡಿಗಳು ಏಳುತ್ತಲೇ ಇವೆಯೆಂದು.



"WWW.ABHIMANYU.COM"

– ಎಸ್. ಎಸ್. ಗಣೇಶ್

ಕಂಪ್ಯೂಟರ್ ಕಮಲಾಂಗಿ, ಹಾಗೂ ಆಕೆಯ ಯಜಮಾನರು ಕಂಪ್ಯೂಟರ್ ಕನಕ ಹಸ್ತ, ಇಬ್ಬರಿಗೂ ಸದಾ ಕಂಪ್ಯೂಟರಿನದೇ ಧ್ಯಾನ. ಮನೆಯಲ್ಲೇ ಒಂದೆರಡು ಕಂಪ್ಯೂಟರುಗಳನ್ನು ಸ್ಥಾಪಿಸಿ, ಇಮೇಲ್, ವೆಬ್‌ಸೈಟ್, ಬ್ರೌಸಿಂಗ್ ಇತ್ಯಾದಿ. ಆಧುನಿಕ ಚಟುವಟಿಕೆಗಳಿಂದ ಸಾರ್ವಜನಿಕರನ್ನು ಆಕರ್ಷಿಸುತ್ತ ಆ ವ್ಯವಹಾರಗಳಿಂದಲೇ ಬೇಕಾದಷ್ಟು ಸಂಪಾದನೆ ಮಾಡಿಕೊಂಡಿದ್ದರು. ಈ ಕಂಪ್ಯೂಟರ್ ಯುಗದ ದಂಪತಿಗಳಿಗೆ ಸೈಬರ್ ಗಂಧವೇ ಇಲ್ಲದ ಮಗ ಪುಟ್ರಾಜು. ಕಮಲಾಂಗಿ, ಕನಕಹಸ್ತ ಕಾಲೇಜಿನಲ್ಲಿದ್ದಾಗಲೇ ಕಂಪ್ಯೂಟರ್ ಕಲಿತವರು. ಕಂಪ್ಯೂಟರ್ ಮೇಲಿನ ಆಸಕ್ತಿಯೇ ಅವರಿಬ್ಬರ ಸಾಮೀಪ್ಯಕ್ಕೆ ಪೂರಕವಾಗಿ, ಪ್ರೀತಿ ಬೆಳೆದು ಪತಿ ಪತ್ನಿಯರಾದವರು. ಪುಟ್ರಾಜುವಾದರೋ ಬಡಪೆಟ್ಟಿಗೂ ಕಂಪ್ಯೂಟರ್ ಹತ್ತಿರ ಸುಳಿಯುತ್ತಿರಲಿಲ್ಲ. ಅವುಗಳಿಗೆ ಸಂಬಂಧಪಟ್ಟ ಬೈಟ್, ಮೌಸ್, ಕ್ಲಿಕ್ ಇಂಥ ಪದಗಳನ್ನು ಆಗಾಗ ಕೇಳಿ ಪರೋಕ್ಷವಾಗಿ ಅವುಗಳ ಸ್ಪಷ್ಟ ಪರಿಚಯ ಮಾಡಿಕೊಂಡಿದ್ದ. ಅಪ್ಪ ಅಮ್ಮ ತಮ್ಮದೇ ಸೈಬರ್ ಲೋಕದಲ್ಲಿ ಮೂರು ಹೊತ್ತು ಮುಳುಗಿರುತ್ತಿದ್ದದ್ದರಿಂದ ಈ ಮಗನನ್ನು ಗಮನಿಸುತ್ತಲೇ ಇರಲಿಲ್ಲ. ಪುಟ್ರಾಜುವಿನ ಪೋಷಣೆಯೆಲ್ಲ ಇಲ್ಲಿ ಪಟ್ಟಣದಲ್ಲೇ ಇದ್ದ ಅಜ್ಜಿ, ಹಳ್ಳಿಯಲ್ಲಿದ್ದ ತಾತ, ಇವರಿಬ್ಬರ ಜವಾಬ್ದಾರಿಯಾಗಿತ್ತು. ಹೆಚ್ಚಿನ ಕಾಲ ತಾತನ ಜತೆಗೇ ಇರುತ್ತ ಹಳ್ಳಿ ಹೈದನಾಗಿ ಬೆಳೆದ. ಇಂಥ ನವನವೀನ ಪ್ರವೃತ್ತಿಯ ಗಂಡ ಹೆಂಡಿರಿಗೆ ಪುಟ್ರಾಜುವಿನಂಥ ಸೀದಾಸಾದ ಮಗ ಹುಟ್ಟಿದ್ದನೆನ್ನುವುದು ಜೀವವಾಹಿ ಜೀನ್ಸ್‌ಗಳ ಕಣ್ಣು ಮುಚ್ಚಾಲೆಯಾಟ ಒಂದು ಸೋಜಿಗವೇ ಸರಿ. ಅವನ ಕಂಪ್ಯೂಟರ್ ಜ್ಞಾನದ ಮಿತಿ ತಿಳಿಯಬೇಕಾದರೆ ಒಂದೇ ಒಂದು ದೃಷ್ಟಾಂತ ಸಾಕು. ಪುಟ್ರಾಜುನನ್ನ ಒಂದು ದಿನ ಅವನ ಅಪ್ಪ ಕರೆದು ''ವಿಂಡೋಸ್ ಓಪನ್ ಮಾಡಿಡು, ಈಗ ಬಂದೆ ಅಂತ ಹೇಳಿ ಏನೋ ಕಾಗದ ಹುಡುಕಲು ಹೋದ. ಪುಟ್ರಾಜು ಮನೆಯ ಕಿಟಕಿಗಳನ್ನೆಲ್ಲ ತೆರೆದಿಟ್ಟ ಅಪ್ಪ ಬಂದು ನೋಡಿ ''ಏಸಿ ಹಾಕಿದ್ದೆಲ್ಲ ಹಾಳಾಯ್ತಲ್ಲೋ ಮುಟ್ಠಾಳ! ಹೋಗಿ ಕಿಟಕಿಗಳನ್ನು ಮುಚ್ಚು'' ಅಂತ ರೇಗಿದ. ಅಪ್ಪ ಹೇಳಿದ್ದು ಕಂಪ್ಯೂಟರಿನ ವಿಂಡೋಸ್ ಓಪನ್ ಮಾಡೂಂತ ಪುಟ್ರಾಜುಗೆ ಹೇಗೆ ತಿಳಿಯಬೇಕು! ಕಂಪ್ಯೂಟರಿನ ಭಾಷೆಯಲ್ಲಿ ಡಾಟ್ಸ್, ಎಂಟರ್, ರಿಟರ್ನ್, ವಿಂಡೋಸ್, ಪೇಜ್‌ಅಪ್, ಮೌಸ್, ಕ್ಲಿಕ್ ಹೀಗೆಲ್ಲ ಸದಾ ಮಾತನಾಡಿಕೊಳ್ಳುತ್ತಿದ್ದ ಅಪ್ಪ ಅಮ್ಮನ ವಾಙ್ಮಯದಿಂದ ಅವನು ಬಹಳ ದೂರ. ಹೋರಿ, ಮಾರಿ, ಮೋರಿ, ಏರಿ, ಓರಿ, ತರಕಾರಿ, ಇವುಗಳ ಪರಿಚಯ ತನ್ನ

ಹಳ್ಳಿಯ ಕೆಲಸಗಳಿಗೆ ಸಾಕಾಗಿತ್ತು. ಇಲ್ಲಿ ಅಮ್ಮ ತನ್ನ ಲ್ಯಾಪ್‌ಟಾಪ್, ಅಪ್ಪ ಡೆಸ್ಕ್‌ಟಾಪ್‌ಗಳಲ್ಲಿ ಮಗ್ನರಾಗಿ, ಇಬ್ಬರೂ ಸರದಿಯಲ್ಲಿ ತನ್ನನ್ನು ಹಳ್ಳಿಗ ಮಾಡಿ, ದಡ್ಡ ಹೀಗೆಲ್ಲ ಏನಾದರೊಂದು ಕಾರಣಕ್ಕೆ ಬೈಯುತ್ತಿದ್ದರು. ಅವನಿಗೆ ರೂಢಿಯೇ ಆಗಿ ಹೋಗಿತ್ತು. ಸುಮ್ಮನೆ ಇದ್ದರೂ ಅವನಿಗೆ ಸೋಮಾರಿ ಅನ್ನುವ ಬೈಗಳು. ಅದಕ್ಕೇ ಅವನು ತನ್ನ ನಗರದ ದಿನಗಳನ್ನು ಆದಷ್ಟು ಕಡಿಮೆ ಮಾಡಿ ಹಳ್ಳಿಯಲ್ಲಿ ತಾತನ ಜೊತೆಗೇ ಭೂಮಿಕಾಣಿ ಕೆಲಸ ನೋಡಿಕೊಂಡು ಹಾಯಾಗಿದ್ದ. ಸಿಟಿಗೆ ಬಂದರೂ ಹೆಚ್ಚಿನ ಸಮಯ ಅಜ್ಜಿಯ ಜತೆಗೇ ಕಳೆಯುತ್ತಿದ್ದ.

ಈ ನಡುವೆ ಒಂದು ಸಂತೋಷದ ವಿಷಯ ಪುಟ್ರಾಜುವಿನ ಗಮನಕ್ಕೆ ಬಂದಿತ್ತು. ಅಮ್ಮನ ಗರ್ಭದಲ್ಲಿ ಒಬ್ಬ ತಮ್ಮ (ಕಂಪ್ಯೂಟರ್ ತಮ್ಮ!), ಬೆಳೆಯುತ್ತಿರುವುದು. ತನ್ನ ಹಾಗಲ್ಲದೆ ತನ್ನ ತಮ್ಮ ಕಂಪ್ಯೂಟರ್ ಯುಗದ ಮೇಧಾವಿ ಶಿಶು ಅನ್ನುವುದು ಪುಟ್ರಾಜುವಿಗೆ ಬಲವಾದ ನಂಬಿಕೆಯಾಗಿತ್ತು. ಕ್ರಮೇಣ ಡಾಕ್ಟರ್‌ಗಳು ಅಮ್ಮನ ಹೆರಿಗೆಗೆ ನಿಷ್ಕರ್ಷೆ ಮಾಡಿದ್ದ ತಾರೀಖೂ ಹತ್ತಿರವಾಯಿತು. ಅಮ್ಮ ಸಿಸೇರಿಯನ್‌ಗೆ ಒಪ್ಪಲಿಲ್ಲ. ನರ್ಸಿಂಗ್ ಹೋಮಿನಲ್ಲಿ ಕಳೆಯಬೇಕಾಗಿ ಬರುವ ಎರಡು ವಾರ ಕಂಪ್ಯೂಟರನ್ನು ಬಿಟ್ಟಿರುವುದು ಹೇಗೆ ಸಾಧ್ಯ! ಇನ್ನೂ ಸ್ವಲ್ಪ ದಿನದಲ್ಲಿ ಕನಕಹಸ್ತನಿಗೂ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಯಾವುದೋ ಕಾನ್ಫರೆನ್ಸಿನಲ್ಲಿ ಭಾಗವಹಿಸಲು ಹೋಗಬೇಕಾಗಿತ್ತು. ಒಟ್ಟಿನಲ್ಲಿ ಹೆರಿಗೆ ಅರ್ಜೆಂಟಾಗಿ ಆದರೆ ಉತ್ತಮ.

ಕನಕಹಸ್ತ ಕಾನ್ಫರೆನ್ಸಿಗೆ ಹೊರಡುವ ದಿನವೂ ಬಂತು. ಮನೆಯಲ್ಲಿ ಯಾರಿಗೂ ಏನು ಮಾಡಲೂ ತೋಚದೆ ದಿಕ್ಕೆಟ್ಟು ಹೋಗಿದ್ದಾರೆ. ಡಾಕ್ಟರ್, ನರ್ಸ್‌ಗಳೂ ಇವರು ಸಿಸೇರಿಯನ್ ಬೇಡವೆಂದ ಮೇಲೆ ಏನು ಮಾಡಿಯಾರು? ಕೊಡುವ ಔಷಧಿಗಳನ್ನೆಲ್ಲ ಕೊಟ್ಟು ತಲೆಯ ಮೇಲೆ ಕೈ ಹೊತ್ತು ಕಾಯುತ್ತ ಕೂತಿದ್ದಾರೆ. ಎಲ್ಲೋ ಹೋಗಿದ್ದ ಪುಟ್ರಾಜು ಈ ಪೇಚಾಟದ ಸಮಯದಲ್ಲಿ ಮನೆಗೆ ಬಂದ. ಮಂಕು ಬಡಿದು ಕೂತಿದ್ದ ಎಲ್ಲರನ್ನೂ ನೋಡಿದ. ಅವರನ್ನೆಲ್ಲ ಕಂಗೆಡಿಸಿದ ಪರಿಸ್ಥಿತಿಯನ್ನು ಒಂದು ಸೆಕೆಂಡಿನಲ್ಲಿ ಗ್ರಹಿಸಿದ. ಇತ್ತೀಚೆಗೆ ಕಲ್ಕತ್ತಾ ಸುದ್ದಿಯೊಂದನ್ನು ಓದಿ ಮೂರು ವರ್ಷ, ಎರಡು ವರ್ಷ, ಒಂದು ವರ್ಷದ ವಯಸ್ಸಿನ ಕಂಪ್ಯೂಟರ್ ''ವಿಸರ್ಡ್'' ಕೂಸುಗಳ ಬಗ್ಗೆ ಅವನು ಸ್ಪಷ್ಟ ತಿಳಿದಿಕೊಂಡಿದ್ದ. ಥಟ್ಟನೆ ಅವನಿಗೆ ಒಂದು ಯೋಚನೆ ಹೊಳೆಯಿತು. ತನ್ನ ಅಮ್ಮನ ಬಸಿರಲ್ಲಿ ಬೆಳೆದ ತನ್ನ ತಮ್ಮನೂ ಈಗಾಗಲೇ ಕಂಪ್ಯೂಟರ್ ಪರಿಣಿತನಾಗಿದ್ದನೆನ್ನುವುದರಲ್ಲಿ ಅವನಿಗೆ ಸಂದೇಹವೇ ಇರಲಿಲ್ಲ. ಅವನಿಗೆ ಅಭಿಮನ್ಯು! ಅಂತ ಹೆಸರೂ ಇಟ್ಟಿದ್ದ. ಆದರೆ ತನ್ನ ದಿಢೀರ್ ಯೋಚನೆಯನ್ನು ಯಾರಲ್ಲಿ ಹೇಳಲೂ ಧೈರ್ಯ ಇಲ್ಲ.

ಅಜ್ಜಿಗೆ ಹೇಳಬಹುದಲ್ಲ! ಅಜ್ಜಿಯ ಮಮತೆಯ ಮಡಿಲಲ್ಲಿ ತಾನೇ ಪುಟ್ರಾಜು ಬೆಳೆದವನು! ಸರಿ, ಅಜ್ಜಿಯ ಹತ್ತಿರ ಹೋಗಿ ಆಕೆಯ ಕಿವಿಯಲ್ಲಿ ಏನೋ ಪಿಸಪಿಸ ಅಂದ. ಅವನ ಸಲಹೆ ಅಜ್ಜಿಗೆ ಸಮಯೋಜಿತವೆನ್ನಿಸಿತೋ ಏನೋ, ನಿಡುವಾಗಿದ್ದ ಆಕೆಯ ಮುಖದ ಮೇಲೆ ಮುಗುಳುನಗೆಯ ರೇಖೆ ಮೂಡಿತು. ಕೂತಲ್ಲಿಂದ ಎದ್ದು ಹೋಗಿ ಡಾಕ್ಟರ್ ಕಿವಿಯಲ್ಲಿ ಪುಟ್ರಾಜುವಿನ ಮಂತ್ರವನ್ನು ಆತನಿಗೂ ಉಸುರಿದರು. ಡಾಕ್ಟರು ಯಾರ ಉಪದೇಶವನ್ನಾದರೂ ಸ್ವೀಕರಿಸಲು ಈಗ ಸಿದ್ಧರಾಗಿದ್ದರಿಂದ, ಕಮಲಾಂಗಿಯ ಪತ್ತಿರ ಒಂದು ಕಂಪ್ಯೂಟರ್ ಮೌಸ್ ತೆಗೆದುಕೊಂಡು ಹೋಗಿ ''ಮೌಸ್, ಮೌಸ್, ಕ್ಲಿಕ್, ಕ್ಲಿಕ್, ಡಬಲ್ ಕ್ಲಿಕ್'' ಅಂತ ಜೋರಾಗಿ ಉಚ್ಚರಿಸಿದರು.

ಮರುಕ್ಷಣ ಆಶ್ಚರ್ಯ, ಆನಂದದ ವಾತಾವರಣ ಮನೆಯನ್ನಾವರಿಸಿತು. ಕಮಲಾಂಗಿಯ ಗರ್ಭದಿಂದ ಪುಟ್ರಾಜುವಿನ ತಮ್ಮ ಆ ಕಂಪ್ಯೂಟರ್ ಮೌಸ್‌ನ ಬಾಲ ಹಿಡಿದು ನಿರಾಯಾಸವಾಗಿ ಹೊರಬಂದ. ಎಲ್ಲರೂ ದಿನಗಟ್ಟಲೆ ಕಾದಿದ್ದ ಡೆಲಿವರಿ ಕ್ಷಣದಲ್ಲಿ ಆಗಿ ಹೋಯಿತು. ಪುಟ್ರಾಜುವಿನ ಅಭಿಮತದಂತೆ ಮಗುವಿಗೆ ಅಭಿಮನ್ಯು ಅಂತ ಹೆಸರಿಡಲು ಎಲ್ಲರೂ ನಿಶ್ಚಯಿಸಿದರು.

ಉಪಸಂಹಾರ:- ಕನಕಹಸ್ತ ಈ ಹೆರಿಗೆಗಾಗಿ, ಅಂದರೆ ನರ್ಸಿಂಗ್‌ಹೋಮ್, ಡಾಕ್ಟರ್, ನರ್ಸ್‌ಗಳ ಖರ್ಚಿಗಾಗಿ ಐನೂರರ ಒಂದು ಕಟ್ಟನ್ನೇ ತೆಗೆದಿಟ್ಟಿದ್ದ. ಡಾಕ್ಟರು ಹಣ ತೆಗೆದುಕೊಳ್ಳಲು ಒಪ್ಪಲಿಲ್ಲ. ಕನ್ಸಲ್ಟೇಷನ್ನಿಗೆಂದು ಅಷ್ಟೋ ಇಷ್ಟೋ ತೆಗೆದುಕೊಂಡು '' ಈ ಡೆಲಿವರಿ ಪುಟ್ರಾಜುವಿನ ಮಂತ್ರೋಚ್ಚಾರಣೆಯ ಫಲ ಅಲ್ಲವೇ?'' ಫೀಸನ್ನ ಅವನಿಗೇ ಕೊಡಿ'' ಅಂದುಬಿಟ್ಟರು. ಕನಕಹಸ್ತ ಪುಟ್ರಾಜುವಿನ ಕೈಗೆ ನೋಟಿನ ಕಂತೆಯನ್ನಿಟ್ಟ. ಪುಟ್ರಾಜು ಅದನ್ನ ಹಿಂತಿರುಗಿಸಿ'' ಅಪ್ಪ, ಹಳ್ಳೀಲಿ ನಾನು ನಿರ್ಭಯನಾಗಿದ್ದೀನಿ. ನನಗಿದರ ಗೊಡವೆ ಬೇಡ. ಇದನ್ನ ಖರ್ಚು ಮಾಡಬೇಕಾದರೆ ನಾಲ್ಕು ಮೈಲಿ ದೂರ ಇರೋ ನಾಗೇಹಳ್ಳಿ ಸಂತೇಗೆ ಹೋಗಬೇಕು. ನನ್ನತ್ರ ದುಡ್ಡಿರೋದು ಸಂತೆಯ ಗೂಂಡಾಗಳಿಗೆ ತಿಳಿದುಹೋದರೆ ನಾನು ಅಲ್ಲಿಂದ ಹಿಂದಿರುಗೋ ಆಸೇನೇ ಬಿಟ್ಟಿಡಬೇಕು.

ಇನ್ನು ನಮ್ಮ ಹಳ್ಳಿಯ ದಿನಸಿ ಅಂಗಡೀಲಿ ಇದನ್ನು ಬಿಚ್ಚಿದರೆ ಅಂಗಡಿ ಶೆಟ್ರು ಅಂಗಡೀನೇ ಮುಚ್ಚಿ ನನ್ನ ಹಿಂದೆ ಬರುತ್ತಾರೆ, ಅಷ್ಟೇ ಶಿಷ್ಯವೃತ್ತಿಗೆ ನನ್ನ ದಿನದ ಬಡ್ಜೆಟ್ಟೋ, ಐವತ್ತು ಪೈಸೆಗೆ ಮಾರೋರಿಲ್ಲ. ಪಾಪಂಪೊಪ್ಪು, ಪುರಿಗಡಲೆಗೆ ಅಜ್ಜಿ, ನಾನು ಬಂದು ಒಂದು ಮುಖ್ಯ ಕೆಲಸ ಮಾಡಿದ ಹಾಗಾಯ್ತು. ತಾತನಿಗೆ ಸುದ್ದಿ ತಿಳಿಸಬೇಕು. ಬೆಳಗಿನ ಬಸ್ಸಿಗೆ ಹೊರಡ್ತೀನಿ'' ಅಂತ ಲೆಕ್ಚರ್ ಹೊಡೆದು ಎಲ್ಲರಿಂದಲೂ ಬೀಳ್ಕೊಂಡ.

★★★

ಹೊಸ ಸಹಸ್ರಮಾನಕ್ಕೊಂದು ಗದ್ಯಗಂಧೀ ಪದ್ಯ

ಭು.ಹೆ

ನನಗಾಗಿ ಏನನ್ನು ಕೇಳೆನು ಪ್ರಭು
ನಾನಿರುವೆ ಪರಾಧೀನ
ಎಲ್ಲ ಬೇರೆಯವರಿಗೇ ಕೊಡು
ಅವರಿದ್ದರೆ ನಾನು। ಅವರಿಟ್ಟರೆ ನಾನು.

ಸಮೃದ್ಧಿಯ ಕೊಡು ಸದ್ಬುದ್ಧಿಯ ಕೊಡು
ನಮ್ಮ ಹಾಲಿನವನಿಗೆ ನೀರಿನವನಿಗೆ
ಹಾಲು ನೀರಿನವನಿಗೆ
ಕುಲಕಸುಬೆ ಕಲಬೆರಕೆ ಮಾಡಿಕೊಂಡವಗೆ ॥ನನಗಾಗಿ॥

ಶಾಂತಿ ನೆಲೆಸುವಂತೆ ಮಾಡು ಪಕ್ಕದ ಮನೆಯಲ್ಲಿ
ಕದನ ವಿರಾಮವಾದರೂ ಆಗೀಗ ಏರ್ಪಡಲಿ
ಹಿಂದಿನ ಮನೆಯಲಿ ಸದ್ದಡಗಲಿ ಮೌನದ ತಂಪಿರಲಿ
ಟೀ ವಿರಾಮದ ಜತೆಗೆ ಟೀವಿ ವಿರಾಮವೂ ದೊರೆಯುವಂತಾಗಲಿ ॥ನನಗಾಗಿ॥

ಇರುಳಿಡೀ ನಿದ್ದೆಯ ಕೊಡು
ಎದುರು ಮನೆಯ ಡಾಲಿಗೆ ಮತ್ತೆ ಅವಳ ಡಾಗಿಗೆ
ಬೊಗಳಿ ಕಾಡುವ ಜೋಡಿಗೆ
ಒರಗಲಿ ಕಾಂಪೌಂಡಿನವರೆಲ್ಲ ಅವರವರ ಪಾಡಿಗೆ ॥ನನಗಾಗಿ॥

ಕರುಣಿಸುತ್ತಲೇ ಇರು ಒಂದಾದ ಮೇಲೊಂದು ಭಡ್ತಿ
ನನ್ನ 'ಮೇಲ್' ಅಧಿಕಾರಿಗೆ ಕಿರಿಕಿರಿಯ ಹಿರಿ ಗೂಬೆಗೆ
ಆತ ಏರುತ್ತಲೇ ಇರಲಿ ಮೇಲೆ ಹೋಗಿ ಬಿಡಲಿ ಮೇಲೆ
ಇಲ್ಲದಿರೆ ಕೂತಿರುತ್ತಾನೆ ನಮ್ಮ ತಲೆಯ ಮೇಲೆ ॥ನನಗಾಗಿ॥

ಕಾಠಿಣ್ಯವ ಬಿಡು ತಾರುಣ್ಯವ ಕೊಡು
ನಮ್ಮ ಲಾರಿ ಬಸ್ಸುಗಳ ಚಾಲಕರುಗಳಿಗೆ ಮಾಲಿಕರುಗಳಿಗೆ
ಡಾಕ್ಟ್ರು ನರ್ಸು ಕಂಪೌಂಡರುಗಳಿಗೆ
ಬದುಕಿಯೇನು ನಾಲ್ಕು ದಿನ ಹೊಸ ಸಹಸ್ರಮಾನದಲಿ ॥ನನಗಾಗಿ॥

ದಗಲ್‌ಬಾಜಿಗಳು

– ಕು. ಗೋ

'ದಗಲ್‌ಬಾಜಿ' ಅಂದ್ರೆ ಏನು ದೊಡ್ಡಪ್ಪಾ ಅಂತ ಕೇಳಿದ ಸುಧಿ. ಏನೋ ಪೂರಿ ಬಾಜಿ, ಆಲೂ ಬಾಜಿ ತರಹ ಒಂದು ತಿಂಡಿ ಇರಬಹುದು' ಎಂದೆ. 'ಅಲ್ಲ ದೊಡ್ಡಪ್ಪ, ನೀವು ಸುಳ್ಳು ಹೇಳುತ್ತಿದ್ದೀರಿ. ಅದೇನೋ ಒಂದು ಬೈಯುವ ಶಬ್ಧ ಇರಬೇಕು' ಎಂದ. 'ಏನು? ಯಾರಾದರೂ ನಿನಗೆ ಹಾಗೇಂತ ಬೈದರೇ?' ಎಂದೆ. 'ಹೌದು' ಎಂದ.

'ನೋಡು ದಗಾ ಅಂದ್ರೆ ಮೋಸ. ದಗಲ್ಬಾಜಿ ಎಂದರೆ ಮೋಸಗಾರ, ವಂಚಕ ಅಂತ ಕನ್ನಡ ನಿಘಂಟು ಹೇಳುತ್ತದೆ' ಎಂದೆ 'ದಗಲ್ಬಾಜಿ ನನಗೂ ದಗಲ್ಬಾಜಿ ಅಂತ ಬೈದನಲ್ಲಾ ಆ ದಗಲ್ಬಾಜಿ' ಎಂದು ಹೇಳಿಕೊಂಡು ಹೋದ ಸುದ್ಧಿ.

ನನಗೂ ಈ ದಗಲ್ಬಾಜಿಗಳ ಅನುಭವ ಸಾಕಷ್ಟು ಆಗಿದೆ. ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ, ಒಂದಲ್ಲ ಒಂದು ಸಮಯದಲ್ಲಿ ದಗಲ್ಬಾಜಿಗಳೇ ಆಗಿರುತ್ತಾರೆ. ಈ ದಗಲ್ಬಾಜಿತನ ಇಲ್ಲದೇ ಇರುವವರು ಮನುಷ್ಯರೇ ಅಲ್ಲ ಅಂತಲೂ ಹೇಳಬಹುದೋ ಏನೋ!

ಇದರಲ್ಲೂ ಕೆಲವರು ಶುದ್ಧ ದಗಲ್ಬಾಜಿಗಳು ಇರುತ್ತಾರೆ. ಪೋಲಿ ಅನ್ನುವಾಗ ಅಪಾಪೋಲಿ ಎಂತಲೂ ಹೇಳುವುದಿಲ್ಲವೇ ಹಾಗೆ. ಬರೀ ಟೀ ಗೂ ಖಡಕ್ ಟೀ ಗೂ ವ್ಯತ್ಯಾಸವಿರುವುದಿಲ್ಲವೇ? ಹಾಗೆಯೇ ಶುದ್ಧ ದಗಲ್ಬಾಜಿ, ಎಂದರೆ ಸ್ವಲ್ಪ ದೊಡ್ಡ ರೀತಿಯ ಮೋಸಗಾರ, ವಂಚಕ ಎಂತಲೂ ಭಾವಿಸಬಹುದು. ದಗಲ್ಬಾಜಿ, ಶುದ್ಧ ದಗಲ್ಬಾಜಿ, ದೊಡ್ಡ ದಗಲ್ಬಾಜಿ ಹೀಗೆ ಕೆಲವು ಪದಗಳನ್ನು ನಾವು ಆಗಾಗ್ಯೆ ಉಚ್ಚರಿಸುತ್ತಲೇ ಇರುತ್ತೇವೆ.

ಈ ದಗಲ್ಬಾಜಿ ಒಬ್ಬ ಮೋಸಗಾರನೇ, ವಂಚಕನೇ ಆಗಿರಬೇಕೆಂದೇನೂ ನಿಯಮವಿಲ್ಲ. ಸ್ವಲ್ಪ ಸತಾಯಿಸುವವ, ಕಿರುಕುಳ ಕೊಡುವವ, ಹೊಟ್ಟೆಕಿಚ್ಚು ಪಡುವವ, ಹೇಳಿದ ಕೆಲಸ ಸಮಯಕ್ಕೆ ಸರಯಾಗಿ ಮಾಡದವ, ಸುಳ್ಳು ಹೇಳಿ ತಪ್ಪಿಸಿಕೊಳ್ಳುವವ, ವಿಘ್ನ ಒಡ್ಡುವವ, ವಿಘ್ನ ಸಂತೋಷಿ, ಚಾಡಿ ಹೇಳುವವ, ಕರುಬುವವ, ಜೀವ ತಿನ್ನುವವ, ಲಂಚ ತಿನ್ನುವವ, ಸುಮ್ಮನೆ ಪೀಡಿಸುವವ, ಯಾರು ಬೇಕಾದರೂ ಈ ದಗಲ್ಬಾಜಿ ಎಂಬ ಪ್ರಶಸ್ತಿ ಪಡೆಯಲು ಅರ್ಹನಾಗಿರುತ್ತಾನೆ. ಅಂಥವನನ್ನು ಹಾಗೆಂದು ಕರೆದೇ ನಿಮಗೆ ರೂಢಿಯಾಗಿದೆ. ಮತ್ತೆ ಈ ಶಬ್ಧ ಪ್ರಯೋಗದಿಂದ ಹೇಳುವವನಿಗೆ ಒಂದು ರೀತಿಯ ಸಂತೋಷವೂ

ಆಗಿ, ಕೇಳುವವನಿಗೆ ಯಾವ ರೀತಿಯ ಬೇಸರವೂ ಆಗದೇ ಇರುವುದೂ ಇದೆ. ದಗಲ್ಬಾಜಿ ಅಂತ ಹೇಳಿದ ಕೂಡಲೇ ತನ್ನ ಮರ್ಯಾದೆ ಹೋಯಿತೆಂದಾಗಲೀ, ತನ್ನ ಘನತೆ ಗೌರವಗಳಿಗೆ ಚ್ಯುತಿಯುಂಟಾಯಿತೆಂದಾಗಲೀ, ಧಕ್ಕೆಯುಂಟಾಯಿತೆಂದಾಗಲೀ ಯಾರೂ ಅತೀ ಬೇಸರ ಪಡುವ ಪರಿಸ್ಥಿತಿಯುಂಟಾಗುವುದಿಲ್ಲ. ಬೇಸರಪಡುವ ಅಗತ್ಯವೂ ಇಲ್ಲ. ಕೆಲವೊಮ್ಮೆ ಬಹಳ ಸಲುಗೆಯಿಂದ ಮಾತನಾಡುವಾಗಲೂ ಈ ಶಬ್ದ ಪ್ರಯೋಗವಾಗುವುದಿದೆ - ' ಅವ ಯಾರ ತಂಟೆಗೂ ಹೋಗುವವನಲ್ಲ. ಅವನಾಯ್ತು ಅವನ ದಗಲ್ಬಾಜಿತನವಾಯ್ತು' ಅಂತ. ಇದನ್ನು ಕೇಳಿ ಯಾರೂ ಹೌಹಾರಿದಂತಿಲ್ಲ. ಈಗ ಅಂತೂ ಬೈಯುವಂಥಾ ಎಷ್ಟೋ ಕಠೋರ ಶಬ್ದಗಳಲ್ಲಿ ಬೈದರೂ ಜನರಿಗೆ ಅಷ್ಟೊಂದು ಕೋಪ ಬರುವುದಿಲ್ಲ. ಎಲ್ಲ ಸರ್ವೇ ಸಾಧಾರಣವಾಗಿದೆ. ಕೇಳಿ ಕೇಳಿ ಕಿವಿ ಜಡ್ಡುಗಟ್ಟಿಹೋಗಿದೆ. ಬೋ..ಮಗ, ಸೂ..ಮಗ, ಮುಟ್ಠಾಳ, ಮಡೆಯ, ಮಡ್ಡಿ, ದುಷ್ಟ, ದುರುಳ, ನೀಚ, ಪಿಶಾಚಿ, ಬೇವಕೂಫ, ಬೇವರ್ಸಿ, ರ್‍ಯಾಸ್ಕಲ್ ಅಂತ ಬೈದರೂ ಯಾರೂ ಅಷ್ಟೊಂದು ಸೀರಿಯಸ್ ಆಗಿ ತೆಗೆದುಕೊಳ್ಳುವುದಿಲ್ಲ. ಅವೆಲ್ಲಕ್ಕಿಂತ ದಗಲ್ಬಾಜಿ ಶಬ್ದವೇ ಸ್ವೀಕಾರಾರ್ಹವಾದ, ಸುಸಂಸ್ಕೃತ ಶಬ್ದವೆಂದು ಭಾವಿಸುವ ಸಾಧ್ಯತೆ ಇದೆ. 'ನೀನೊಬ್ಬ ಶುದ್ಧ ದಗಲ್ಬಾಜಿ' ಎಂದರೆ ' ಆಯ್ತು ಮಾರಾಯಾ - ನಾನು ದಗಲ್ಬಾಜಿಯೇ ಏನಾಯ್ತೀಗ ' ಎಂಬ ಉತ್ತರವೇ ಬಂದೀತು.

ಹಿಂದೆ ಎಲ್ಲ ಎಂತೆಂಥ ದಗಲ್ಬಾಜಿಗಳು ಇದ್ದರು ಎಂದು ನಾವು ಚರಿತ್ರೆಯ ಪುಟಗಳನ್ನೋ, ಪುರಾಣಗಳ ಪ್ರಕರಣಗಳನ್ನೋ, ಗ್ರಂಥಗಳ ಹಾಳೆಗಳನ್ನೋ ಬಿಡಿಸಿದರೆ ಗೊತ್ತಾಗುತ್ತದೆ. ಆದರೆ ದಗಲ್ಬಾಜಿಗಳಿಗೆ ಈಗೇನು ಕೊರತೆಯೇ? ಎಂತೆಂಥ ದಗಲ್ಬಾಜಿಗಳು ಬೇಕು ನಿಮಗೆ - ಹೆಜ್ಜೆ ಹೆಜ್ಜೆಗೂ ಸಿಗುತ್ತಾರೆ. ಪತ್ರಿಕೆಗಳ ಪುಟ ಪುಟಗಳಲ್ಲೂ, ಲೇಖನಗಳ ಪ್ಯಾರಾಪ್ಯಾರಾಗಳಲ್ಲೂ ಈ ದಗಲ್ಬಾಜಿಗಳ ವಿವರಗಳು, ವರ್ಣನೆಗಳು, ಅವರ ಆಟೋಟಾಪಗಳು, ಲೀಲೆಗಳು, ಜಾಣ್ಮೆಗಳು ತಿಳಿಯುತ್ತವೆ. ಹುಟ್ಟಿದ ಮೇಲೆ ಹೇಗಾದರೂ ಬದುಕಬೇಕಲ್ಲಾ. ಈ ದಗಲ್ಬಾಜಿತನವಿಲ್ಲದಿದ್ದರೆ 'ಮರ್ಯಾದೆಯಿಂದ' ಬದುಕುವುದಾದರೂ ಹೇಗೆ? ಹೀಗಾಗಿ ಇದು ಬದುಕಿನ ಅವಿಭಾಜ್ಯ ಅಂಗವಾಗಿ ಹೋಗಿದೆ ಎಂದರೆ ಯಾವ ದಗಲ್ಬಾಜಿಯೂ ಅಲ್ಲ ಎನ್ನಲಿಕ್ಕಿಲ್ಲ.

ಕೊಟ್ಟವ ಕೋಡಂಗಿ, ಈಸಿ ಕೊಂಡವ ಈರಭದ್ರ ಎನ್ನುತ್ತಾರೆ. ಈಸಿಕೊಂಡವನೇ ಕೋಡಂಗಿಯಾಗುವ ಎಷ್ಟು ಪ್ರಕರಣಗಳಿಲ್ಲ. ಕೊಟ್ಟವನೂ ದಗಲ್ಬಾಜಿಯಾಗುತ್ತಾನೆ, ಈಸಿಕೊಂಡವ ಇನ್ನೂ ಸ್ವಲ್ಪ ದೊಡ್ಡ ದಗಲ್ಬಾಜಿಯೇ ಆಗಬೇಕಾಗುತ್ತದೆ, ಆಗುತ್ತಾನೆ ಕೂಡಾ. ಕಾಲ ಮಹಾತ್ಮೆ ಎಂದು ಹೇಳೋಣವೆಂದರೆ ಇದು ಸರ್ವಕಾಲದಲ್ಲೂ ಇತ್ತು, ಇದೆ, ಇರಲೇ

ಬೇಕಾಗುತ್ತದೆ, ದೇವಲೋಕದಲ್ಲೂ ಇದೆ ಎಂಬ ಕಲ್ಪನೆ ನಮಗಿದೆ. ನರ, ವಾನರ ಲೋಕದಲ್ಲಂತೂ ಇದ್ದೇ ಇದೆ. ಹೀಗಾಗಿ ಈ ಶಬ್ದ ಕಿವಿ ತಮಟೆಗೆ ಬಡಿದೊಡನೆ ದಿಗಿಲು ಪಡಬೇಕಾದ್ದೇನೂ ಇಲ್ಲ. ಏಕೆಂದರೆ ದಿಗಿಲು ಪಡಿಸುವಂಥಾ ಥಾಕತ್ತನ್ನು ಆ ಶಬ್ಧ ಎಂದೋ ಕಳೆದುಕೊಂಡಿದೆ.

'ಮಂಗ ಮಾಡುವುದು' ಎಂಬ ಪ್ರಯೋಗದ ಪರ್ಯಾಯವಾಗಿ ಈ ದಗಲ್ಬಾಜಿ ಪದವನ್ನು ಉಪಯೋಗಿಸುವುದನ್ನು ನಾವು ನೋಡಿದ್ದೇವೆ. ಮೊದಲೇ 'ಮಂಗ' ನಾಗಿರುವಾಗ ಪುನಃ ಮಂಗ ಮಾಡುವುದೆಂದರೇನು? ಎಲ್ಲರಿಗೂ ಚಾಪೆಯಡಿಯಲ್ಲಿ ನುಸುಳಲು ಗೊತ್ತಿರುತ್ತದೆ. ರಂಗೋಲಿಯಡಿಯಲ್ಲೂ ನುಸುಳಲು ಪ್ರಯತ್ನಿಸುತ್ತಾರೆ. ' ಅಷ್ಟೆಲ್ಲ ಬುದ್ಧಿವಂತಿಕೆ ಇಲ್ಲದಿದ್ದರೆ ಈ ಸಮಾಜದಲ್ಲಿ ಬದುಕಲು ಸಾಧ್ಯವೇ ಸ್ವಾಮೀ ' ಎಂಬ ಪ್ರಶ್ನೆ ನಮ್ಮ ಮುಂದೆ ಬಂದು ನಿಲ್ಲುತ್ತದೆ. ಈ ಜಗತ್ತಿನಲ್ಲಿ ಪ್ರಯತ್ನಿಸಿದರೆ ನಾವು ಯಾವ ದಗಲ್ಬಾಜಿತನವೂ ಇಲ್ಲದೆ ಬದುಕಲು ಸಾಧ್ಯವಿದೆ. ಆದರೆ ಸಮಾಜದಲ್ಲಿ? ದಗಲ್ಬಾಜಿತನವಿಲ್ಲದೆ ಬದುಕಲು ನಿಮ್ಮನ್ನು ಬಿಟ್ಟಾರೆಯೇ?

ಒಟ್ಟಿನಲ್ಲಿ 'ದಗಲ್ಬಾಜಿ ಯಾರು' ಎಂದು ಕೇಳಿದರೆ 'ದಗಲ್ಬಾಜಿ' ಯಾರು ಅಲ್ಲ? ' ಎಂಬ ಪ್ರಶ್ನೆ ಬಂದೀತು.'ದೇವರು'? ಎಂದು ಅಪ್ಪಿ ತಪ್ಪಿ ಏನಾದರೂ ಕೇಳಿದರೆ 'ಹೂಂ ಅವ ದೊಡ್ಡ ದಗಲ್ಬಾಜಿ' ಎಂಬ ಉತ್ತರವೂ ಬರುತ್ತದೆ, ಆಸ್ತಿಕರು ಗೊಣಗಿಕೊಂಡಾರು 'ಏನು ಈ ದಗಲ್ಬಾಜಿ ಹೀಗೆಲ್ಲಾ ಬರೆಯುತ್ತಿದ್ದಾನೆ' ಎಂದು. ನಾನ್ಯಾಕೆ ಇಷ್ಟು ಸಣ್ಣ ವಿಷಯಕ್ಕೆ ದಗಲ್ಬಾಜಿಯಾಗಲಿ?



''ಇಂಡಿಯಾ
ಗೆಲ್ಲೋ ಹಾಗೆ
ಮ್ಯಾಚ್ ಫಿಕ್ಸ್
ಮಾಡುಕ್ಕಾಗುಲ್ಲವೇನೋ''

Printed by V.R. NATH for the Publisher KORAVANJI APARANJI TRUST. Published by KORAVANJI APARANJI TURST, 36, 6th Main Road, Malleswaram, Bangalore - 560 003.
PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010
Editor : M. SHIVAKUMAR